Swabhimani Sahakari
Pages - 24, ₹12
Volume -14
Issue - 02
February - 2017

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




## 'ಪರಿವರ್ತನೆ, ಶಕ್ತಿಯುಕ್ತ ಮತ್ತು ಸ್ವಚ್ಛ ಭಾರತ'

### 2017-18 ಸಾಲಿನ ಬಜೆಟ್ ಕಾರ್ಯಸೂಚಿ

- ರೂ.10 ಲಕ್ಷ ಕೋಟಿ: ಕೃಷಿ ಸಾಲ
- ರೂ.3 ಲಕ್ಷ ಕೋಟಿ: ಗ್ರಾಮೀಣ ಜನರ ಉನ್ನತಿಗೆ
- ದೇಶದ 600ಕ್ಕೂ ಹೆಚ್ಚು ಜಿಲ್ಲೆಗಳಿಗೆ ಪ್ರಧಾನ ಮಂತ್ರಿ ಕೌಶಲ ಕೇಂದ್ರ ವಿಸ್ತರಣೆ
- ರೂ. 500 ಕೋಟಿ ವೆಚ್ಚದಲ್ಲಿ 'ಮಹಿಳಾ ಶಕ್ತಿ ಕೇಂದ್ರ' ಸ್ಥಾಪನೆ
- ರೈಲ್ವೆ, ರಸ್ತೆ ಹಾಗೂ ಜಲಮಾರ್ಗದ ಸಂಪರ್ಕ ವ್ಯವಸ್ಥೆಗಾಗಿ ರೂ. 2.41 ಲಕ್ಷ ಕೋಟಿ
- ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ರೂ. 2.44 ಲಕ್ಷ ಕೋಟಿ ಗುರಿ



24
ಮಹಾಶಿವರಾತ್ರಿ
ಶುಭಾಷಯಗಳು
ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು

ಸೌಹಾರ್ದ ಸಹಕಾರಿಗಳ ಸಂಖ್ಯೆ : 3927 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1004

ಸ್ವಾಭಿಮಾನಿ ಸಹಕಾರಿ



# ಸನ್ನದು ಲೆಕ್ಕಪರಿಶೋಧಕರ ಅರ್ಥಪೂರ್ಣ ಕಾರ್ಯಾಗಾರ

ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಹಾಶಿವರಾತ್ರಿಯ ಶುಭಹಾರೈಕೆಗಳು. ಪರಶಿವನು ನಮ್ಮೆಲ್ಲರ ಕಷ್ಟಗಳನ್ನು ನಿವಾರಿಸಿ, ನಮ್ಮ ಬಾಳಿನಲ್ಲಿ ಸುಖ, ಶಾಂತಿ, ನೆಮ್ಮದಿ ಹಾಗೂ ಸಕಲ ಸೌಭಾಗ್ಯಗಳನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಗೆ, ಬೆಳವಣಿಗೆಗೆ ಅನೇಕ ಕಾರಣಗಳಲ್ಲಿ ಲೆಕ್ಕಪರಿಶೋಧನೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಲೆಕ್ಕಪರಿಶೋಧನೆಯ ವರದಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಹಾಗೂ ಹಣಕಾಸಿನ ಭದ್ರತೆಯ ಕೈಗನ್ನಡಿ. ಸೌಹಾರ್ದ ಸಹಕಾರಿಯ ಆರೋಗ್ಯಕರ ಬೆಳವಣಿಗೆಗೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯ ಸಮಯದಲ್ಲಿ ಪರಿಶೀಲಿಸುವ, ಶೋಧಿಸುವ, ವಿಮರ್ಶಿಸುವ, ಸೂಚಿಸುವ ಹಾಗೂ ಸತ್ಯ ವಿಷಯಗಳನ್ನು ದೃಢೀಕರಿಸುವ ಮಹತ್ವದ ಪಾತ್ರವನ್ನು ನಿರ್ವಹಿಸುವವರಾದ್ದರಿಂದ ಅವರನ್ನು ಸಹಕಾರಿ ಮಾರ್ಗದರ್ಶಿ ಎಂದು ಕರೆಯಬಹುದಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈಗ 3920ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಲೆಕ್ಕಪರಿಶೋಧನೆಯ ಕಾರ್ಯ ಕಳೆದ 4 ವರ್ಷಗಳಿಂದ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ. ಲೆಕ್ಕಪರಿಶೋಧನಾ ಇಲಾಖೆಯಲ್ಲಿ ನೋಂದಾಯಿತವಾಗಿರುವ ಸನ್ನದು ಲೆಕ್ಕಪರಿಶೋಧಕರನ್ನು ಸೌಹಾರ್ದ ಸಹಕಾರಿಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಈ ಹಿಂದೆ ಸಂಯುಕ್ತ ಸಹಕಾರಿಯು ಆಡಿಟ್ ನಮೂನೆಯನ್ನು ಸಿದ್ಧಪಡಿಸಿ ಲೆಕ್ಕಪರಿಶೋಧಕರಿಗೆ ಒದಗಿಸಿತ್ತು. ಪ್ರಸ್ತುತ ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ ಈ ಲೆಕ್ಕಪರಿಶೋಧಕರಿಗೆ ಆಡಿಟ್ ನಮೂನೆಯನ್ನು ಒದಗಿಸಿದೆ.

ದಿನಾಂಕ 30, 31 ಜನವರಿ 2017ರಂದು ಬೆಂಗಳೂರಿನಲ್ಲಿ ಮತ್ತು ದಿನಾಂಕ 6 ಫೆಬ್ರವರಿ 2017ರಂದು ಬೆಳಗಾವಿಯಲ್ಲಿ ಹಮ್ಮಿಕೊಂಡಿದ್ದ ಸನ್ನದು ಲೆಕ್ಕಪರಿಶೋಧಕರ ಕಾರ್ಯಾಗಾರವು ಅವರು ನಿರ್ವಹಿಸುವ ಆಡಿಟ್‌ನಲ್ಲಿ ಕೆಲವು ಹಂತದಲ್ಲಿ ಕೆಲವು ಬದಲಾವಣೆಗಳು, ಕೆಲವು ವಿವರಣೆಗಳು, ಕೆಲವು ಸಮಸ್ಯೆಗಳ ನಿವಾರಣೆ, ಕೆಲವು ಮಾರ್ಗದರ್ಶನ, ಕೆಲವು ಸಲಹೆ ಹೀಗೆ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲಿರುವುದು ಸ್ವಾಗತಾರ್ಹ. ವಿಚಾರಗಳ ಮಂಡನೆ, ವಿಚಾರ ವಿನಿಮಯಗಳು, ಸನ್ನದು ಲೆಕ್ಕಪರಿಶೋಧಕರ ಭಾಗವಹಿಸುವಿಕೆ ಹಾಗೂ ಸಂವಾದ ಕಾರ್ಯಕ್ರಮಗಳು ಅರ್ಥಪೂರ್ಣವಾಗಿತ್ತು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಇದು ಪೂರಕವಾಗಿದೆ ಮತ್ತು ಮಾರ್ಗದರ್ಶಿಯಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಉಳಿದ ಭಾಗಗಳಲ್ಲಿ ಈ ರೀತಿಯ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳಲಿದೆ. ರಾಜ್ಯದ ಸನ್ನದು ಲೆಕ್ಕಪರಿಶೋಧಕರು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನಗಳನ್ನು ಸಂಯುಕ್ತ ಸಹಕಾರಿಗೆ ತಿಳಿಸಲು ಕ್ರಮವಿಡುವುದು. ತಮ್ಮ ಸಲಹೆ ಹಾಗೂ ಮಾರ್ಗದರ್ಶನ ವಿಷಯಗಳ ಬಗ್ಗೆ ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಹಾಗೂ ಸಂಬಂಧಿಸಿದವರಲ್ಲಿ ಸಂಯುಕ್ತ ಸಹಕಾರಿಯು ಸಂಪರ್ಕ ಹೊಂದಿ ಮುಂದಿನ ಕ್ರಮವನ್ನು ಜರುಗಿಸಲಾಗುತ್ತದೆ.

**ಹೆಚ್.ವಿ.ರಾಜೀವ,** ಉಪಾಧ್ಯಕ್ಷರು

ಲೆಕ್ಕಪರಿಶೋಧನಾ ಇಲಾಖೆಯಲ್ಲಿ ನೋಂದಾಯಿತವಾಗಿರುವ ಸನ್ನದು ಲೆಕ್ಕಪರಿಶೋಧಕರನ್ನು ಸೌಹಾರ್ದ ಸಹಕಾರಿಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಈ ಹಿಂದೆ ಸಂಯುಕ್ತ ಸಹಕಾರಿಯು ಆಡಿಟ್ ನಮೂನೆಯನ್ನು ಸಿದ್ಧಪಡಿಸಿ ಲೆಕ್ಕಪರಿಶೋಧಕರಿಗೆ ಒದಗಿಸಿತ್ತು.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
“ನಿರ್ಮಾಣ ಭವನ”, ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ....................4
2017-18ನೇ ಸಾಲಿನ ಬಜೆಟ್‌ನ ಪ್ರಮುಖಾಂಶಗಳು ...........5
ಸಂಯುಕ್ತ ಸಹಕಾರಿಯ ಸಮಾಚಾರಗಳು ........6
ನಷ್ಟದಲ್ಲಿರುವ ಹಾಗೂ ಲೆಕ್ಕಪರಿಶೋಧನೆ ಕೈಗೊಳ್ಳದ ಸಹಕಾರಿಗಳಿಗೆ ತರಬೇತಿ ಪ್ರಾಮಾಣಿಕ ಹಾಗೂ ನಿಷ್ಠೆಯ ಸೇವೆಯಿಂದ ಸಹಕಾರಿಗಳ ಪ್ರಗತಿ ಸಾಧ್ಯ – ಶ್ರೀ ಎಮ್.ಜಿ. ಪಾಟೀಲ ....................10
68ನೇ ಗಣರಾಜ್ಯೋತ್ಸವ ದಿನಾಚರಣೆ ............11
ಸೌಹಾರ್ದ ಸಹಕಾರಿಯ ದಿನಾಚರಣೆ ............13
ಪ್ರಶ್ನೆ-ಉತ್ತರ....................18
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ ....................19
ಲೇಖನ : ಲೆಕ್ಕಪರಿಶೋಧನೆ ....................20
ಆರ್‌ಬಿಐ ನ್ಯೂಸ್ ....................23

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ, ವೃತ್ತಿಪರತೆ, ಕಾರ್ಯಕ್ಷಮತೆ ಅಭಿವೃದ್ಧಿ ಮತ್ತು ಪಾರದರ್ಶಕತೆಗೆ ಆದ್ಯತೆ ಅವಶ್ಯಕ

ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭದ ದಿನದಿಂದಲೂ ಅಂದರೆ 2001 ರಿಂದಲೂ ಸನ್ನದು ಲೆಕ್ಕಪರಿಶೋಧಕರು ನಿರ್ವಹಿಸುತ್ತಾ ಬಂದಿದ್ದಾರೆ. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಮತ್ತು ಇತ್ತೀಚೆಗೆ 97ನೇ ಸಂವಿಧಾನ ತಿದ್ದುಪಡಿಯ ಶಿಫಾರಸ್ಸಿನ ನಂತರ ಸಹ ಸನ್ನದು ಲೆಕ್ಕಪರಿಶೋಧಕರೇ ಲೆಕ್ಕಪರಿಶೋಧನೆ ಮಾಡುವುದು ಎಂದು ಮುಂದುವರೆಸಿದ ನಂತರ ಸನ್ನದು ಲೆಕ್ಕಪರಿಶೋಧಕರು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಈ ಲೆಕ್ಕಪರಿಶೋಧನೆ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಶಿಕ್ಷಣ ಹಾಗೂ ಮಾರ್ಗದರ್ಶನವನ್ನು ನೀಡುವುದರ ಜೊತೆಗೆ ಸಿಬ್ಬಂದಿಯವರಿಗೆ ತರಬೇತಿ ಹಾಗೂ ಲೆಕ್ಕಪತ್ರ ನಿರ್ವಹಿಸುವಲ್ಲಿ ಚಾಕಚಕ್ಯತೆಗಳನ್ನು ಕಲಿಸುವುದು ಮತ್ತು ಲೆಕ್ಕಪತ್ರಗಳ ವ್ಯವಹಾರಗಳಲ್ಲಿ ಮಾಡುವುದು ಮತ್ತು ಮಾಡದಿರುವುದರ ಬಗ್ಗೆ ಜ್ಞಾನ ನೀಡುವುದು, ಸಿಬ್ಬಂದಿಯವರ ಕಾರ್ಯದಕ್ಷತೆ ಹೆಚ್ಚುವುದರ ಜೊತೆಗೆ ಸೌಹಾರ್ದ ಸಹಕಾರಿಗಳಲ್ಲಿ ವೃತ್ತಿಪರತೆ, ಪಾರದರ್ಶಕತೆ ಮತ್ತು ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ.

ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಹಾಗೂ ಬಹುತೇಕ ಸಹಕಾರ ಸಂಘಗಳಿಗಿಂತಲೂ ಭಿನ್ನವಾಗಿದೆ. ಬಹುತೇಕ ಸೌಹಾರ್ದ ಸಹಕಾರಿಗಳು ಆಧುನಿಕ ತಂತ್ರಜ್ಞಾನವನ್ನು ಬಳಸಿ ಗಣಕೀಕರಣ ವ್ಯವಸ್ಥೆಯನ್ನು ಉಪಯೋಗಿಸುತ್ತಿರುವುದರಿಂದ ಲೆಕ್ಕಪರಿಶೋಧಕರಿಗೆ ಸುಲಭವಾಗುತ್ತದೆ. ಆದಾಗ್ಯೂ ಕೂಡ ಕೆಲವು ನ್ಯೂನ್ಯತೆಗಳು ಸಹಕಾರಿಗಳ ಹಂತದಲ್ಲಿ ಹಾಗೂ ಲೆಕ್ಕಪರಿಶೋಧಕರ ಹಂತದಲ್ಲಿ ಕಂಡುಬರುತ್ತಿರುವುದು ಲೆಕ್ಕಪರಿಶೋಧಕರ ಬದ್ಧತೆಯನ್ನು ಹಾಗೂ ಸೌಹಾರ್ದ ಸಹಕಾರಿಗಳ ವೃತ್ತಿಪರತೆ ಹಾಗೂ ಕಾರ್ಯಕ್ಷಮತೆಯನ್ನು ಪ್ರಶ್ನಿಸುವಂತಾಗುತ್ತದೆ.

ಸೌಹಾರ್ದ ಸಹಕಾರಿಗಳು ಹೊಸ ತಲೆಮಾರಿನ ಸಹಕಾರಿ ಸಂಸ್ಥೆಗಳೆಂದು ಬಿಂಬಿಸಲಾಗಿದೆ. ಹೆಚ್ಚಾಗಿ ಯುವಕರೇ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತಿರುವುದರಿಂದ ಅವರಿಗೆ ಸಹಕಾರ ಕ್ಷೇತ್ರದ ಬಗ್ಗೆ ಅಗತ್ಯವಾದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿ ಹಮ್ಮಿಕೊಳ್ಳುತ್ತಿರುವುದು ಸ್ವಾಗತಾರ್ಹ. ಸನ್ನದು ಲೆಕ್ಕಪರಿಶೋಧಕರು ಮತ್ತು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರು ಸಹ ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ವಿಷಯಗಳನ್ನು ಸಂಯುಕ್ತ ಸಹಕಾರಿಯ ಗಮನಕ್ಕೆ ತಂದಲ್ಲಿ ಸಂಯುಕ್ತ ಸಹಕಾರಿಯು ಅವುಗಳ ಬಗ್ಗೆ ಸೂಕ್ತ ಕ್ರಮಗಳನ್ನು ಜರುಗಿಸಲು ಸಾಧ್ಯವಾಗುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಸೌಹಾರ್ದ ಸಹಕಾರಿಗಳ ವೃತ್ತಿಪರತೆ, ಕಾರ್ಯಕ್ಷಮತೆ ಹಾಗೂ ಪಾರದರ್ಶಕತೆಯನ್ನು ವೃದ್ಧಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಆಶಯ.



## ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ವಿಶ್ರಾಮ

ದೇವನಿಗೆ 'ಆಶ್ರಯ' ಎನ್ನುವ ಶಬ್ದವಿದೆ. ಹಾಗಂತ ಋಷಿಗಳು ವರ್ಣಿಸಿದ್ದಾರೆ. ಮನುಷ್ಯ ಬದುಕಿನಲ್ಲಿ ಹೊರಗೆ ಒಳಗೆ ದುಡಿಯುತ್ತಾನೆ. ದಣಿವು ಆಗುತ್ತದೆ. ದಣಿವನ್ನು ಆರಿಸಿಕೊಳ್ಳಲು ವಿಶ್ರಾಮ ಬೇಕಾಗುತ್ತದೆ. ಒಂದು ದೈಹಿಕ ವಿಶ್ರಾಮ, ಇನ್ನೊಂದು ಮಾನಸಿಕ ವಿಶ್ರಾಮ ಬೇಕಾಗುತ್ತದೆ. ದೈಹಿಕ ವಿಶ್ರಾಮ ಸುಲಭ. ಕೆಲಸ ಮಾಡುವುದನ್ನು ನಿಲ್ಲಿಸಿದರೆ ಸಾಕು ದೈಹಿಕ ವಿಶ್ರಾಮ ಸಿಗುತ್ತದೆ. ವಿಶ್ರಾಮ ದಣಿವನ್ನು ತೆಗೆಯುತ್ತದೆ, ಶಕ್ತಿಯನ್ನು ತುಂಬುತ್ತದೆ, ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಕಾರ್ಯಕ್ಕೆ ಮಹತ್ವ ಕೊಟ್ಟಂತೆ ವಿಶ್ರಾಮಕ್ಕೂ ಮಹತ್ವ ಕೊಡಬೇಕು. ದೇಹ ನಿರಂತರವಾಗಿ ದುಡಿಯುವುದಕ್ಕೆ ಸಾಧ್ಯವೇ? ಅದಕ್ಕೂ ಮಿತಿ ಇದೆ, ಆ ಮಿತಿ ಮೀರಿದರೆ ಅಶಕ್ತತೆ ಉಂಟಾಗುತ್ತದೆ. ಮನುಷ್ಯ ಅದ್ಭುತ ಕಾರ್ಯಗಳನ್ನು ಮಾಡಬಲ್ಲ. ಆದರೆ, ದಣಿವಾದಾಗ ಒಂದು ಹೂವನ್ನು ಎತ್ತುವುದಕ್ಕೂ ಆಗುವುದಿಲ್ಲ. ಗುಡ್ಡ ಎತ್ತುವವನು... ಹೂವು ಎತ್ತುವುದಕ್ಕೆ ಆಗುವುದಿಲ್ಲ. ಆದ್ದರಿಂದ, ವಿಶ್ರಾಮ ಬಹಳ ಅವಶ್ಯ.

ಮನಸ್ಸಿಗೆ ವಿಶ್ರಾಮ ಮುಖ್ಯ. ಮನಸ್ಸಿನ ಶಕ್ತಿಗೂ ಸೀಮೆ ಇಲ್ಲವೇ? ಅದನ್ನು ಎಷ್ಟೂ ಅಂತ ಬಳಸುವುದು? ಹಾಗೇ ಬದುಕಿನ ಕೆಲಸಗಳಿಗೂ ವಿಶ್ರಾಮ ಮುಖ್ಯ. ವಿಶ್ರಾಮ ಅಂದರೆ ಬರೀ ವಿಶ್ರಾಮ ಅಲ್ಲ. ದಣಿದ ಮನುಷ್ಯ ಹಾಗೇ ಹುಲ್ಲಿನ ಮೇಲೆ, ಇಲ್ಲವೇ ನೆಲದ ಮೇಲೆ ಮಲಗಿದಾಗ ಸಿಗುತ್ತದಲ್ಲಾ ಅದು, ನಿಸರ್ಗ ನಿರ್ಮಿಸಿದ ವಿ...ಶ್ರಾ...ಮ.

ಭಾರತ ದೇಶದ ಬಹುದೊಡ್ಡ ವಿಜ್ಞಾನಿ. ಯುರೋಪ್ ದೇಶದಲ್ಲಿ ಗೌರವದಿಂದ ಕಾಣುವ ಹೆಸರು. ಜಗದೀಶ ಚಂದ್ರಬೋಸ್ ಅವರು ಹೇಳುತ್ತಾರೆ... ಮನುಷ್ಯನಿಗೆ ದಣಿವಾದಂತೆ, ವಸ್ತುಗಳಿಗೂ ದಣಿವು ಆಗುತ್ತದೆ. ಅವುಗಳಿಗೂ ವಿಶ್ರಾಂತಿ ಬೇಕಾಗುತ್ತದೆ. ದಣಿವು – ವಿಶ್ರಾಮ, ದಣಿವು – ವಿಶ್ರಾಮ ಇದು ಪ್ರತಿ ವಸ್ತುವಿನ ನಿಯಮ. ಎಂಥ ದೊಡ್ಡಮನೆ! ದೊಡ್ಡ ಬೆಡ್‌ರೂಂ! ಮೆತ್ತನೆ ಹಾಸಿಗೆ, ಇವುಗಳು ಮುಖ್ಯವಲ್ಲ. ಕ್ಷಣದ ನಿದ್ರೆ ಸುಳಿಯದಿದ್ದರೆ? ಏನು ಮಾಡುವುದು. ನಿಸರ್ಗವೇ ನಮ್ಮ ಮೇಲೆ ವಿಶ್ರಾಮವನ್ನು ಹೇರುತ್ತದೆ.

ನಾವು ವಿಶ್ರಾಮವನ್ನು ದೂರ ಇಡುತ್ತೇವೆ ಅಂದರೂ ಅದು ಹೇರುತ್ತದೆ. ದೈಹಿಕ ವಿಶ್ರಾಮ ಎಲ್ಲರಿಗೂ ಗೊತ್ತಿದೆ. ಮನಸ್ಸಿಗೆ ವಿಶ್ರಾಮ ಕೊಟ್ಟರೆ ಅದ್ಭುತ ಕೆಲಸಗಳಾಗುತ್ತವೆ. ಮನಸ್ಸಿನ ವಿಶ್ರಾಮಕ್ಕೆ ಯೋಗ ಎನ್ನುತ್ತೇವೆ. ಅದು ಸುಲಭವಲ್ಲ, ಕಠಿಣ. ಮನಸ್ಸಿಗೆ ಸಹಜ ವಿಶ್ರಾಂತಿ ಇಲ್ಲದಿದ್ದರೆ ಮನಸ್ಸಿನಲ್ಲಿ ವಿಷಯಗಳು ದಾಳಿ ಮಾಡುತ್ತವೆ. ನಮ್ಮನ್ನು ಕಟ್ಟಿಬಿಡುತ್ತವೆ. ಒಂದು ರೀತಿ ಭ್ರಮಾತ್ಮಕ ಜಗತ್ತು ರೂಪ ಆಗುತ್ತದೆ.

## ಸೆವನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಕೋ-ಆಪರೇಟಿವ್ ಲಿ., ಮಾಲೂರು ಸಹಕಾರಿಯ ಜಪ್ತಿ ಆದೇಶದ ಸ್ಥಿರೀಕರಿಸಲಾದ ಆದೇಶ

- ದಿನಾಂಕ : 05-12-2016ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441 ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಾದಿ : ವಿಶೇಷಾಧಿಕಾರಿ, ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಕೋ-ಆಪರೇಟಿವ್ ಲಿ., ಮಾಲೂರು ಟೌನ್, ಕೋಲಾರ ಜಿಲ್ಲೆ ವಿರುದ್ಧ ಪ್ರತಿವಾದಿಯವರು : 1) ಎನ್.ಗೀತಾ ಗಂ. ಆರ್ ಮಂಜುನಾಥ, ಮಾಲೂರು ಟೌನ್, ಕೋಲಾರ ಜಿಲ್ಲೆ. 2) ಜಿ.ನಾರಾಯಣಪ್ಪ ತಂದೆ ಗಿಡ್ಡಪ್ಪ, ಮಾಲೂರು ಟೌನ್, ಕೋಲಾರ ಜಿಲ್ಲೆ ಇದಕ್ಕೆ ಸಂಬಂಧಿಸಿದಂತೆ ವಾಜ್ಯ ಸಂಖ್ಯೆ: ಜೆಆರ್‌ಡಿ/ಕ.ರಾ.ಸೌ.ಸಂ.ಸ./172/2016-2017ರಲ್ಲಿ ದಿನಾಂಕ 16-11-2016ರ ಆದೇಶದ ಷೆಡ್ಯೂಲ್ ಸ್ಥಿರಾಸ್ತಿಗಳು ಅನುಬಂಧ ಎ ರಿಂದ ಸಿ ಆದೇಶದ ಅನುಬಂಧದಲ್ಲಿನ ಸ್ಥಿರಾಸ್ತಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 44 (2)ರಂತೆ ಸ್ಥಿರೀಕರಿಸಲಾಗಿದೆ.
- ದಿನಾಂಕ : 05-12-2016ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441 ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಾದಿ : ವಿಶೇಷಾಧಿಕಾರಿ, ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಕೋ-ಆಪರೇಟಿವ್ ಲಿ., ಮಾಲೂರು ಟೌನ್, ಕೋಲಾರ ಜಿಲ್ಲೆ ವಿರುದ್ಧ ಪ್ರತಿವಾದಿಯವರು : 1) ವಿಜಯಕುಮಾರ ತಂದೆ ವೆಂಕಟೇಶಪ್ಪ, ಮಾಲೂರು ಟೌನ್, ಕೋಲಾರ ಜಿಲ್ಲೆ. 2) ಕೆ.ಎಚ್.ಉಮಾದೇವಿ ಗಂ. ಆರ್.ಟಿ.ಮೋಹನಕುಮಾರ, ಪಾವಗಡ ಟೌನ್, ತುಮಕೂರು ಜಿಲ್ಲೆ ಇದಕ್ಕೆ ಸಂಬಂಧಿಸಿದಂತೆ ವಾಜ್ಯ ಸಂಖ್ಯೆ: ಜೆಆರ್‌ಡಿ/ಕ.ರಾ.ಸೌ.ಸಂ.ಸ./171/2016-2017ರಲ್ಲಿ ದಿನಾಂಕ 16-11-2016ರ ಆದೇಶದ ಷೆಡ್ಯೂಲ್ ಸ್ಥಿರಾಸ್ತಿಗಳು ಅನುಬಂಧ ಎ ಆದೇಶದ ಅನುಬಂಧದಲ್ಲಿನ ಸ್ಥಿರಾಸ್ತಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 44 (2)ರಂತೆ ಸ್ಥಿರೀಕರಿಸಲಾಗಿದೆ.

## 2017–18ನೇ ಸಾಲಿನ ಬಜೆಟ್‌ನ ಪ್ರಮುಖಾಂಶಗಳು

# ಜೇಟ್ಲಿ ಬಜೆಟಲಿ ಎಲ್ಲವೂ ಡಿಜಿಟಲಿ




### ಸರ್ವಾಂಗ ಸುಂದರ ಬಜೇಟ್ಲಿ

ಪಂಚರಾಜ್ಯ ಚುನಾವಣೆಯ ವಾಸನೆಯುಲ್ಲದ, ನೋಟ್ಯಂತರದ ಪರಿಣಾಮಗಳ ಬಗ್ಗೆ ಮಾತಿಲ್ಲದ, ಜನಸಾಮಾನ್ಯನ ಹುಬ್ಬೇರಿಸುವಂಥ ಏರಿಕೆ–ಇಳಿಕೆಗಳ ಭರಾಟೆಯಿಲ್ಲದ, ಸರ್ವಾಂಗ ಸುಂದರ ಸುಧಾರಣಾ ಬಜೆಟ್ ಅನ್ನು ವಿತ್ತ ಸಚಿವ ಅರುಣ್ ಜೇಟ್ಲಿ ಬುಧವಾರ ಮಂಡಿಸಿದರು.

ವಿಶ್ವದ ಆರ್ಥಿಕತೆ ಹೋರಾಟಯುಕ್ತವಾಗಿರುವ ಹಾಗೂ ರಾಜಕೀಯ ಏರುಪೇರು ಸಂಭವಿಸುತ್ತಿರುವ ಸಂದರ್ಭದಲ್ಲಿ, ಪ್ರಸಕ್ತ ಸಾಲಿನ ಬಜೆಟ್ ಮಂಡನೆ ಮಾಡುತ್ತಿದ್ದೇನೆ. ಕಳೆದ ಎರಡೂವರೆ ವರ್ಷಗಳಲ್ಲಿ ಜಾಗತಿಕ ವರದಿಯಲ್ಲಿ, ಭಾರತದ ಆರ್ಥಿಕತೆಯಲ್ಲಿ ಪ್ರಗತಿ ಕಂಡು ಬಂದಿದೆ. ಭಾರತ ವಿಶ್ವದಲ್ಲಿಯೇ ಆರನೇ ಅತಿ ದೊಡ್ಡ ಉತ್ಪಾದನಾ ದೇಶವಾಗಿ ಹೊರಹೊಮ್ಮಿದೆ. ಕಳೆದ ಒಂದು ವರ್ಷದಲ್ಲಿ ಭಾರತ ಐತಿಹಾಸಿಕ ಆರ್ಥಿಕ ಸುಧಾರಣೆಗೆ ಸಾಕ್ಷಿಯಾಗಿದೆ. – **ಅರುಣ್ ಜೇಟ್ಲಿ**, ಹಣಕಾಸು ಸಚಿವ

ಎಲ್ಲ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ರೂಪಿಸಲಾಗಿದೆ. ಭ್ರಷ್ಟಾಚಾರ ಮತ್ತು ಕಪ್ಪುಹಣ ನಿರ್ಮೂಲನೆಗೆ ಸರ್ಕಾರ ನಡೆಸುತ್ತಿರುವ ಪ್ರಯತ್ನ ಬಜೆಟ್‌ನಲ್ಲಿ ಸ್ಪಷ್ಟವಾಗಿದೆ. – **ನರೇಂದ್ರ ಮೋದಿ**, ಪ್ರಧಾನಿ




**1,900 ಕೋಟಿ ರೂ.**

63 ಸಾವಿರ ಸಹಕಾರ ಸಂಘಗಳ ಅಭಿವೃದ್ಧಿ, ಜಿಲ್ಲಾ ಸಹಕಾರಿ ಬ್ಯಾಂಕುಗಳ ಬೆಳವಣಿಗೆಗೆ ನಬಾರ್ಡ್‌ಗೆ ಮೂರು ವರ್ಷದ ಅವಧಿಯಲ್ಲಿ 1,900 ಕೋಟಿ ರೂ.

**10,00,000 ಕೋಟಿ ರೂ.**
ರೈತರಿಗೆ ಸಾಲ ನೀಡುವುದಕ್ಕಾಗಿ ಮೀಸಲಿಟ್ಟ ಒಟ್ಟು ಮೊತ್ತ



ಭರ್ಜರಿ ಯೋಜನೆ, ಆಕರ್ಷಕ ಘೋಷಣೆಗಳಿಲ್ಲದ, ಕೊಡಬೇಕಾದಷ್ಟನ್ನು ಕೊಟ್ಟು, ಬಿಡಬೇಕಾದ್ದನ್ನು ಬಿಟ್ಟಿರುವ, ಭ್ರಮಾಲೋಕ ಸೃಷ್ಟಿಸದ ಸೀದಾ ಸಾದಾ ಸರಳ ಬಜೆಟ್.

ಬಜೆಟ್ ಮಂಡನೆಯ ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬಂದು ದೂರದೃಷ್ಟಿತ್ವ ಕಲ್ಪನೆಯ ಹೊಸ ಅವಕಾಶಗಳನ್ನು ಹುಟ್ಟುಹಾಕಿದ ಮುಂಗಡಪತ್ರ.

ನೋಟ್ಯಂತರದಿಂದ ಸಂಗ್ರಹವಾದ ಕಪ್ಪುಹಣದ ಪ್ರಯೋಜನವನ್ನು ಬಡ ಜನರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಬಜೆಟ್‌ನಲ್ಲಿ ಇಣುಕಿದೆ.

ಉದ್ದೇಶಪೂರ್ವಕ ಸುಸ್ತಿದಾರರು ದೇಶಬಿಟ್ಟು ಹೋಗುವುದನ್ನು ತಡೆಯಲು ಹಾಗೂ ಈಗಾಗಲೇ ವಿದೇಶಕ್ಕೆ ಪರಾರಿಯಾಗಿರುವ ಸುಸ್ತಿದಾರರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನು ರಚನೆಯ ಘೋಷಣೆ.

**3,016 ಕೋಟಿ ರೂ.**
ಕೌಶಲಾಭಿವೃದ್ಧಿ /ಉದ್ಯಮಶೀಲತೆ ಸಚಿವಾಲಯಕ್ಕೆ ಮೀಸಲು

**48,853 ಕೋಟಿ ರೂ.**
ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ನೀಡಲಾದ ಅನುದಾನ

**22,095 ಕೋಟಿ ರೂ.**
ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಮೀಸಲು

**1,07,758 ಕೋಟಿ ರೂ.**
ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ನೀಡಲಾದ ಒಟ್ಟು ಅನುದಾನ



**51,026ಕೋಟಿ ರೂ.**
ಕೃಷಿ ಮತ್ತು ರೈತರ ಕಲ್ಯಾಣಕ್ಕಾಗಿ ನೀಡಲಾಗಿರುವ ಅನುದಾನ

**6,482 ಕೋಟಿ ರೂ.**
ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ ಕ್ಷೇತ್ರಕ್ಕೆ ಮೀಸಲು

**7,763 ಕೋಟಿ ರೂ.**
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣಕ್ಕೆ ಮೀಸಲು

**20,011ಕೋಟಿ ರೂ.**
ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕಾಗಿ ಮೀಸಲು

**6,406 ಕೋಟಿ ರೂ.**
ವಸತಿ ಮತ್ತು ನಗರ ಬಡತನ ನಿವಾರಣೆಗೆ ಮೀಸಲು

63 ಸಾವಿರ ಕೃಷಿ ಸಹಕಾರ ಸಂಘಗಳ ಅಭಿವೃದ್ಧಿ, ಜಿಲ್ಲಾ ಸಹಕಾರಿ ಬ್ಯಾಂಕುಗಳ ಬೆಳವಣಿಗೆಗೆ ನಬಾರ್ಡ್‌ಗೆ ಮೂರು ವರ್ಷದ ಅವಧಿಯಲ್ಲಿ ರೂ. ರೂ.1900ಕೋಟಿ

**648**
ವಿಜ್ಞಾನ ಕೇಂದ್ರಗಳು

ಮಣ್ಣು ಪರೀಕ್ಷೆಗಾಗಿ 648 ಕೃಷಿ ವಿಜ್ಞಾನ ಕೇಂದ್ರಗಳ ಸ್ಥಾಪನೆ.

## ರಾಜ್ಯದ ಸೌಹಾರ್ದ ಸಹಕಾರಿಗಳ ಸನ್ನದು ಲೆಕ್ಕಪರಿಶೋಧಕರಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ಕಾರ್ಯಾಗಾರ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಗಳ ಸನ್ನದು ಲೆಕ್ಕಪರಿಶೋಧಕರ ಒಂದು ದಿನದ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಭಾರತೀಯ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆ, ಬೆಂಗಳೂರು ಶಾಖೆ ಹಾಗೂ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಸಹಯೋಗದೊಂದಿಗೆ ದಿನಾಂಕ 30 ಹಾಗೂ 31 ಜನವರಿ 2017ರಂದು ಭಾರತೀಯ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆ, ಬೆಂಗಳೂರು ಶಾಖೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

## ಸನ್ನದು ಲೆಕ್ಕಪರಿಶೋಧಕರು ಸಹಕಾರಿಗಳ ಹಿತಚಿಂತಕರಾಗಿ ಕಾರ್ಯನಿರ್ವಹಿಸುವುದು ಅಗತ್ಯ – ಶ್ರೀ ದಿವಾಕರ

**ದಿನಾಂಕ :** 30 ಜನವರಿ 2017ರಂದು ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿದ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಕಾಸ್‌ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ದಿವಾಕರರವರು ಸಹಕಾರಿ ಸಂಸ್ಥೆಗಳ ಲೆಕ್ಕಪರಿಶೋಧನೆ ಸಂಸ್ಥೆಯ ಪ್ರಗತಿಯ ಕನ್ನಡಿ ಇದ್ದಂತೆ. ಸನ್ನದು ಲೆಕ್ಕಪರಿಶೋಧಕರು ಸಹಕಾರಿ ಸಂಸ್ಥೆಗಳಿಗೆ ಒಬ್ಬ ಅಧಿಕಾರಿಯಂತೆ ಹೋಗದೇ ಒಬ್ಬ ಮಾರ್ಗದರ್ಶಿಯಾಗಿ ಹಾಗೂ ಸಹಕಾರಿಯ ಹಿತಚಿಂತಕನಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.



ಉದ್ಘಾಟನಾ ಕಾರ್ಯಕ್ರಮ

## ಸನ್ನದು ಲೆಕ್ಕಪರಿಶೋಧಕರಿಗೆ ಸಹಕಾರ ಆಡಿಟ್ ಇಲಾಖೆಯಿಂದ ಸಂಪೂರ್ಣ ಸಹಕಾರ – ಶ್ರೀ ಪ್ರಶಾಂತ ಕುಮಾರ

97ನೇ ಸಂವಿಧಾನ ತಿದ್ದುಪಡಿಯ ನಂತರ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರಿಗೆ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿ 1500ಕ್ಕೂ ಹೆಚ್ಚು ಸನ್ನದು ಲೆಕ್ಕಪರಿಶೋಧಕರು ಈ ಪಟ್ಟಿಗೆ ಸೇರಿದ್ದಾರೆ. ಇವರ ಜೊತೆಗೆ ಸಹಕಾರ ಆಡಿಟ್ ಇಲಾಖೆಯ ಆಡಿಟ್‌ರವರೂ ಸಹ ಲೆಕ್ಕಪರಿಶೋಧನೆ ಮಾಡುತ್ತಾರೆ.

ಹೀಗಾಗಿ ರಾಜ್ಯದ 35000ಕ್ಕೂ ಹೆಚ್ಚು ಸಹಕಾರ ಸಂಘಗಳ 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲಾಗುತ್ತದೆ. ಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧನಾ ಶೈಲಿ ಹಾಗೂ ಇಲಾಖೆಯ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ಶೈಲಿಯಲ್ಲಿ ಕೆಲವು ಭಿನ್ನತೆಗಳನ್ನು ನಾವು ಗಮನಿಸಿದ್ದೇವೆ. ಸನ್ನದು ಲೆಕ್ಕಪರಿಶೋಧಕರು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಸುತ್ತೋಲೆಗಳನ್ನು ಹಾಗೂ ಆಡಿಟ್ ವರದಿಯ ಮಾದರಿಗಳನ್ನು ಗಮನಿಸಿ ಕಾರ್ಯ ನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

## ಸಹಕಾರಿಗಳ ಆಡಿಟ್ ಎಲ್ಲರಿಗೂ ಬರುವಂತೆ ಕ್ರಮ ಅಗತ್ಯ – ಶ್ರೀಮತಿ ಗೀತಾ

ಅಧ್ಯಕ್ಷತೆ ವಹಿಸಿ, ಮಾತನಾಡಿದ ಚಾರ್ಟೆರ್ಡ್ ಅಕೌಂಟೆಂಟ್ ಸಂಸ್ಥೆಯ ಬೆಂಗಳೂರು ಶಾಖೆಯ ಉಪಾಧ್ಯಕ್ಷರಾದ ಶ್ರೀಮತಿ ಗೀತಾರವರು ಮಾತನಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಮ್ಮ ಸಂಸ್ಥೆಯ ಸಭಾಂಗಣದಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿರುವುದು ಅತ್ಯಂತ ಸಂತೋಷದ ವಿಷಯ. ಅವರಿಗೆ ನಮ್ಮ ಸಂಸ್ಥೆಯು ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದು ಎಂದು ತಿಳಿಸಿ, ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಕೆಲವೇ ಸನ್ನದು ಲೆಕ್ಕಪರಿಶೋಧಕರಿಗೆ ಸಿಗುತ್ತಿದೆ. ಪ್ಯಾನೆಲ್‌ನಲ್ಲಿ ಇರುವ ಎಲ್ಲರಿಗೂ ಆಡಿಟ್ ಕೆಲಸ ಸಿಗುತ್ತಿಲ್ಲ, ತಾರತಮ್ಯವಾಗುತ್ತಿದೆ. ಇದನ್ನು ನಿವಾರಿಸಲು ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಗಮನಹರಿಸಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಅತಿಥಿಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ

97ನೇ ಸಂವಿಧಾನ ತಿದ್ದುಪಡಿಗಿಂತ ಮೊದಲು ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧಕರ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯನಿರ್ವಹಿಸುತ್ತಿತ್ತು. ಸಂಯುಕ್ತ ಸಹಕಾರಿಯು ಸಿದ್ಧಪಡಿಸಿದ ಪಟ್ಟಿಯಿಂದ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ಕಾರ್ಯ ನಡೆಯುತ್ತಿತ್ತು.

ಸನ್ನದು ಲೆಕ್ಕಪರಿಶೋಧಕರಿಗೆ ನಿರಂತರವಾಗಿ ತರಬೇತಿ ಕಾರ್ಯಕ್ರಮಗಳನ್ನು ಬೆಂಗಳೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ ಹಾಗೂ ಬಳ್ಳಾರಿಗಳಲ್ಲಿ ಏರ್ಪಡಿಸಿ, ಸಂಯುಕ್ತ ಸಹಕಾರಿಯು ಸಿದ್ಧಪಡಿಸಿರುವ ಮಾದರಿಯಲ್ಲಿ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲು ಸೂಚಿಸಲಾಗುತ್ತಿತ್ತು. ನಂತರ ಆಡಿಟ್ ವರದಿಗಳನ್ನು ಸಹ ಪರಿಶೀಲಿಸುವ ಕಾರ್ಯವನ್ನು ನಿರ್ವಹಿಸಿ, ಲೋಪದೋಷಗಳನ್ನು ಸಂಬಂಧಿಸಿದ ಲೆಕ್ಕಪರಿಶೋಧಕರಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ತಿಳಿಸಿ, ಸಮಜಾಯಿಷಿಗಳನ್ನು ಕಳುಹಿಸಲು ಸೂಚಿಸಲಾಗುತ್ತಿತ್ತು.

ಪ್ರಸ್ತುತ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರು ಲೆಕ್ಕಪರಿಶೋಧಕರ ಪಟ್ಟಿಯನ್ನು ನಿರ್ವಹಿಸುತ್ತಿರುವುದರಿಂದ ಸಂಯುಕ್ತ ಸಹಕಾರಿಯು ಆಡಿಟ್ ವರದಿಗಳ ಪರಿಶೀಲನೆಯನ್ನು ಮಾತ್ರ ನಿರ್ವಹಿಸುತ್ತಿದೆ. ಲೆಕ್ಕಪರಿಶೋಧಕರ, ಸೌಹಾರ್ದ ಸಹಕಾರಿಗಳ ಹಾಗೂ ಲೆಕ್ಕಪರಿಶೋಧನಾ ಇಲಾಖೆಯ ಮಧ್ಯದ ಸೇತುವೆಯಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ಸಭೆಯನ್ನುದ್ದೇಶಿಸಿ ಮಾತನಾಡಿ, ನಂತರ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥರವರು "Overview, Recent Developments & Expectations of Souharda Federal from Auditors" ಮತ್ತು ಶ್ರೀ ಶ್ರೀರಾಮರವರು "Audit Guidelines, Reporting" ಮತ್ತು ಶ್ರೀ ಶಿವಕುಮಾರರವರು "Audit Programme and Audit Planning" ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು.

## ಸಂವಾದ ಕಾರ್ಯಕ್ರಮ (Panel Discussion)

ದಿನಾಂಕ 30 ಜನವರಿ 2017ರಂದು ಮಧ್ಯಾಹ್ನ ನಡೆದ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಪರ ನಿರ್ದೇಶಕರಾದ ಶ್ರೀ ಪ್ರಕಾಶ ಮಜ್ಜಿಗೆಯವರು ವಹಿಸಿದ್ದರು. ಸೌಹಾರ್ದ ಸಹಕಾರಿ ಸಂಸ್ಥೆಗಳ ಪರವಾಗಿ ಶ್ರುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿ, ಸೃಜನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ಕೆ.ಶ್ರೀನಿವಾಸ, ಉದಯ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ, ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಬಾಬುರೆಡ್ಡಿ, ಚಾರ್ಟೆರ್ಡ್ ಅಕೌಂಟೆಂಟರುಗಳ ಪರವಾಗಿ ಶ್ರೀ ಮಧುಕರ ಹೆಗಡೆ, ಶ್ರೀ ಶಿವಕುಮಾರ ಮತ್ತು



ಶ್ರೀಮತಿ ಗೀತಾರವರು ಉಪಸ್ಥಿತರಿದ್ದು, ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿಯ ಅನೇಕ ವಿಷಯಗಳ ಬಗ್ಗೆ ಚರ್ಚೆಗಳು ಹಾಗೂ ಸಂವಾದವು ಪರಿಣಾಮಕಾರಿಯಾಗಿ ನಡೆದವು.

## ಸನ್ನದು ಲೆಕ್ಕಪರಿಶೋಧಕರು ಆಡಿಟ್ ಪ್ರೋಗ್ರಾಮ್ ಮಾಡುವುದು ಅವಶ್ಯಕ - ಶ್ರೀ ಪ್ರಕಾಶ ಮಜ್ಜಿಗೆ



ಸಂವಾದ ಕಾರ್ಯಕ್ರಮದ ಕೊನೆಯಲ್ಲಿ ಅಧ್ಯಕ್ಷತೆಯ ಭಾಷಣ ಮಾಡಿದ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಪರ ನಿರ್ದೇಶಕರಾದ ಶ್ರೀ ಪ್ರಕಾಶ ಮಜ್ಜಿಗೆಯವರು ಸನ್ನದು ಲೆಕ್ಕಪರಿಶೋಧಕರು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಮಾಡುವಾಗ ಒಂದು ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಪಡಿಸಿ ಇಲಾಖೆಗೆ ಸಲ್ಲಿಸುವುದು ಅವಶ್ಯಕ. ಸಹಕಾರಿ ಇಲಾಖೆಯ ಆಡಿಟರುಗಳಿಗೆ ಇದೇ ರೀತಿಯ ಕಾರ್ಯಕ್ರಮವನ್ನು ಇಲಾಖೆಯ ವತಿಯಿಂದ ಸೂಚನೆ ನೀಡಲಾಗುತ್ತಿದೆ.

ಇಲಾಖೆಯ ಆಡಿಟರುಗಳು ಆಡಿಟ್ ಕಾರ್ಯಕ್ರಮವನ್ನು

ನೀಡುತ್ತಾರೆ. ಅದೇ ರೀತಿ ಸನ್ನದು ಲೆಕ್ಕಪರಿಶೋಧಕರು ರೂಢಿಸಿಕೊಂಡಾಗ ಆಡಿಟ್ ಪ್ರಗತಿಯನ್ನು ಉಸ್ತುವಾರಿ ಮಾಡಲು ಸುಲಭವಾಗುತ್ತದೆ. ಸನ್ನದು ಲೆಕ್ಕಪರಿಶೋಧಕರು ಆಡಿಟ್ ವರದಿಯನ್ನು ಸಹಕಾರ ಇಲಾಖೆಗೆ ಹಾಗೂ ಸಂಬಂಧಿಸಿದವರಿಗೆಲ್ಲಾ ವರದಿಯನ್ನು ಬೇಗನೆ ಕಳುಹಿಸಬೇಕು. ಕೆಲವರು ಬಹಳ ತಡಮಾಡುತ್ತಾರೆ, ಅದು ಒಳ್ಳೆಯದಲ್ಲ ಮತ್ತು ಆಡಿಟ್ ವರದಿಗಳನ್ನು ಅಚ್ಚುಕಟ್ಟಾಗಿ ಮತ್ತು ಉತ್ತಮವಾಗಿ ಬೈಂಡ್ ಮಾಡಿ, ಉತ್ತಮ ದಾಖಲಾತಿಯಂತೆ ಕಳುಹಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 75 ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿ, ಪ್ರಯೋಜನ ಪಡೆದರು.

### ಲೆಕ್ಕಪರಿಶೋಧನಾ ಶುಲ್ಕ ಪಾವತಿಗೆ ನೆಗೋಶಿಯೇಷನ್ ಬೇಡ : ಸನ್ನದು ಲೆಕ್ಕಪರಿಶೋಧಕರ ಮನವಿ

**ಲೆಕ್ಕಪರಿಶೋಧನಾ ಶುಲ್ಕ ಪಾವತಿಗೆ ನೆಗೋಶಿಯೇಷನ್‌ಗೆ ಅವಕಾಶವಿರದಂತೆ ಸರ್ಕಾರವು ಲೆಕ್ಕಪರಿಶೋಧನಾ ಶುಲ್ಕ ಪಾವತಿಗಾಗಿ ಮಾನದಂಡ ಆದೇಶ ಹೊರಡಿಸಬೇಕೆಂದು ಸನ್ನದು ಲೆಕ್ಕಪರಿಶೋಧಕರ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಪರ ನಿರ್ದೇಶಕರನ್ನು ಸನ್ನದು ಲೆಕ್ಕಪರಿಶೋಧಕರು ವಿನಂತಿಸಿದರು.**

## ಲೆಕ್ಕಪರಿಶೋಧಕರ ಗುಣಾತ್ಮಕತೆಗೆ (Value addition) ಉತ್ತಮ ಅವಕಾಶ : ಶ್ರೀ ಎಮ್.ಕೆ.ಅಯ್ಯಪ್ಪ

**ದಿನಾಂಕ :** 31 ಜನವರಿ 2017ರಂದು ನಡೆದ ಕಾರ್ಯಾಗಾರವನ್ನು ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಮ್.ಕೆ. ಅಯ್ಯಪ್ಪ, ಐ.ಎ.ಎಸ್.ರವರು ಉದ್ಘಾಟಿಸಿ, ಇದೊಂದು ಉತ್ತಮ ಕಾರ್ಯಾಗಾರ. ಸನ್ನದು ಲೆಕ್ಕಪರಿಶೋಧಕರಿಗೆ ಹೆಚ್ಚಿನ ಮಾಹಿತಿ ನೀಡುವಂತಹದ್ದು. ಸೌಹಾರ್ದ ಸಹಕಾರಿಗಳ ನಿರೀಕ್ಷೆಗೆ ಹಾಗೂ ಸಂಯುಕ್ತ ಸಹಕಾರಿ ಮತ್ತು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ನಿರೀಕ್ಷೆಗಳಿಗೆ ಸನ್ನದು ಲೆಕ್ಕಪರಿಶೋಧಕರು ಯಾವ ರೀತಿಯಲ್ಲಿ ಸ್ಪಂದಿಸುವ ಅಗತ್ಯತೆ ಇದೆ ಎಂಬುದನ್ನು ತಿಳಿಯಲು ಉತ್ತಮ ಅವಕಾಶ. ಇಂತಹ ತರಬೇತಿ ಕಾರ್ಯಕ್ರಮಗಳು ಎಲ್ಲಾ ಜಿಲ್ಲೆಗಳಲ್ಲೂ ನಡೆಯಬೇಕು. ಈ ಕಾರ್ಯಕ್ರಮವನ್ನು ಆಯೋಜಿಸಿದ ಸಂಯುಕ್ತ ಸಹಕಾರಿಯ



ಆಡಳಿತ ಮಂಡಲಿಯವರಿಗೆ ಅಭಿನಂದನೆಗಳನ್ನು ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ತಿಳಿಸಿದರು.

## ಲೆಕ್ಕಪರಿಶೋಧಕರು ಸಹಕಾರಿ ಸಂಸ್ಥೆಗಳ ಮಾರ್ಗದರ್ಶಿ ಹಾಗೂ ಸ್ನೇಹಿತ – ಶ್ರೀ ಹೆಚ್.ವಿ. ರಾಜೀವ



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು 97ನೇ ಸಂವಿಧಾನ ತಿದ್ದುಪಡಿಯಾಗಿ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯಾಗಿ ಸಹಕಾರ ಲೆಕ್ಕಪರಿಶೋಧಕರ ಪಟ್ಟಿಯನ್ನು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರು ನಿರ್ವಹಿಸುತ್ತಿರುವ ಪೂರ್ವದಲ್ಲಿ 2002 ರಿಂದಲೇ ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧಕರ ಪಟ್ಟಿಯ ನಿರ್ವಹಣೆ ಮಾಡುತ್ತಿತ್ತು. ಅವರುಗಳಿಗೆ ತರಬೇತಿಯನ್ನು ಸಹ ವ್ಯವಸ್ಥೆ ಮಾಡುತ್ತಾ ಬಂದಿದೆ.

ರಾಜ್ಯದಲ್ಲಿ ಕಳೆದ 16 ವರ್ಷಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 3925ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಲೆಕ್ಕಪರಿಶೋಧನಾ ವರದಿಗಳನ್ನು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಪರಿಶೀಲಿಸುತ್ತಾರೆ. ಆ ಸಂದರ್ಭಗಳಲ್ಲಿ ಕೆಲವು ನ್ಯೂನ್ಯತೆಗಳನ್ನು ಗಮನಿಸಿದ್ದಾರೆ.

ಸನ್ನದು ಲೆಕ್ಕಪರಿಶೋಧಕರಿಗೆ ಕೆಲವು ವಿಷಯಗಳನ್ನು ಗಮನಕ್ಕೆ ತರಬೇಕಿದೆ ಮತ್ತು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರಿಂದಲೂ ಕೆಲವು ನಿರೀಕ್ಷೆಗಳಿವೆ. ಸಂಯುಕ್ತ ಸಹಕಾರಿಯಿಂದಲೂ ಕೆಲವು ನಿರೀಕ್ಷೆಗಳಿವೆ ಮತ್ತು ಸೌಹಾರ್ದ ಸಹಕಾರಿಗಳಿಂದಲೂ ಕೆಲವು ನಿರೀಕ್ಷೆಗಳಿವೆ.

ಹೀಗಾಗಿ ಹಲವಾರು ವಿಧವಾದ ನಿರೀಕ್ಷೆಗಳಿಗೆ ಸ್ಪಂದಿಸುವ ವೇದಿಕೆ ಇದಾಗಿದೆ. ಹಣಕಾಸಿನ ಆಡಿಟ್ ಜೊತೆಗೆ ಆಡಳಿತಾತ್ಮಕ ಆಡಿಟ್‌ಗೂ ಸನ್ನದು ಲೆಕ್ಕಪರಿಶೋಧಕರು ಗಮನಹರಿಸಬೇಕು ಎಂದು ತಿಳಿಸಿದರು. ಹೀಗಾಗಿ ಸನ್ನದು ಲೆಕ್ಕಪರಿಶೋಧಕರು ಸಹಕಾರಿಗಳ ಮಾರ್ಗದರ್ಶಿ ಹಾಗೂ ಸ್ನೇಹಿತನಂತೆ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶರಾದ ಶ್ರೀ ಪ್ರಶಾಂತ ಕುಮಾರ, ಸನ್ನದು ಲೆಕ್ಕಪರಿಶೋಧಕರ ಸಂಸ್ಥೆಯ ಬೆಂಗಳೂರು ಶಾಖೆಯ ಅಧ್ಯಕ್ಷರಾದ ಶ್ರೀ ಪಂಪಣ್ಣ ಇವರುಗಳು ಮಾತನಾಡಿದರು. ಪ್ರಾರಂಭದಲ್ಲಿ ಶ್ರೀಮತಿ ಸವಿತಾರವರ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ. ಕುಮಾರರವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸನ್ನದು ಲೆಕ್ಕಪರಿಶೋಧಕರ ಸಂಸ್ಥೆಯ ಬೆಂಗಳೂರು ಶಾಖೆಯ ಉಪಾಧ್ಯಕ್ಷರಾದ ಶ್ರೀಮತಿ ಗೀತಾರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ 135 ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿ, ಪ್ರಯೋಜನ ಪಡೆದರು.

## ಸಂವಾದ ಕಾರ್ಯಕ್ರಮ

ದಿನಾಂಕ 31 ಜನವರಿ 2017ರಂದು ನಡೆದ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ, ಶ್ರೀ ಸುನೀಲ್ ಕುಮಾರ್, ಸಮುದಾಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಆಶಾ ರಾಮನ್‌ರವರು ಭಾಗವಹಿಸಿದ್ದರು. ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಪರ ನಿರ್ದೇಶಕರಾದ ಶ್ರೀ ಪ್ರಕಾಶ ಮಜ್ಜಿಗೆಯವರು ವಹಿಸಿದ್ದರು.



## ಸಂಯುಕ್ತ ಸಹಕಾರಿಯ ನವವಿವಾಹಿತ ಸಿಬ್ಬಂದಿಯವರಿಗೆ ಅಭಿನಂದನೆ



**ವಿವಾಹಿತರು : ಶ್ರೀ ರಘುನಂದನ್ ಕೆ, ಶ್ರೀ ವೃಷಭನಾಥ್, ಶ್ರೀ ವಿನೋದ.ಹೆಚ್.ಎ., ಶ್ರೀ ವಿಶ್ವನಾಥ್, ಶ್ರೀ ರವಿರಾಜ್ ಹಾಗೂ ಶ್ರೀಮತಿ ನಯನ.**

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

ದಾವಾ ದಾಖಲಾತಿ : ಬೆಳಗಾವಿ ವಿಭಾಗದಿಂದ 887 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 412 ಸೇರಿದಂತೆ ಒಟ್ಟು 1299 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 155 ಪ್ರಕರಣಗಳು ಇತ್ಯರ್ಥಗೊಂಡಿವೆ.

ಅಮಲ್ಜಾರಿ ಪ್ರಕರಣಗಳು : ಒಟ್ಟು 56 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 01 ಪ್ರಕರಣ ಇತ್ಯರ್ಥಗೊಂಡಿದೆ ಹಾಗೂ ಸಹಕಾರಿಗಳ ಸಹಾಯಕ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 80 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತವೆ.

## ನಷ್ಟದಲ್ಲಿರುವ ಹಾಗೂ ಲೆಕ್ಕಪರಿಶೋಧನೆ ಕೈಗೊಳ್ಳದ ಸಹಕಾರಿಗಳಿಗೆ ತರಬೇತಿ

## ಪ್ರಾಮಾಣಿಕ ಹಾಗೂ ನಿಷ್ಠೆಯ ಸೇವೆಯಿಂದ ಸಹಕಾರಿಗಳ ಪ್ರಗತಿ ಸಾಧ್ಯ - ಶ್ರೀ ಎಮ್.ಜಿ. ಪಾಟೀಲ

**ವಿಜಯಪುರ :** ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ನಷ್ಟ ಅನುಭವಿಸುತ್ತಿರುವ ಹಾಗೂ ಲೆಕ್ಕಪರಿಶೋಧನೆ ಕೈಗೊಳ್ಳದ ಸಹಕಾರಿಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ 24 ಜನವರಿ 2017ರಂದು ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯ ವತಿಯಿಂದ ವಿಜಯಪುರದ ಹೊಟೇಲ್ ಶುಭಶ್ರೀ ಸಾಗರದಲ್ಲಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



ತರಬೇತಿಯ ಉದ್ಘಾಟನೆ ನೆರವೇರಿಸಿ, ಮಾತನಾಡಿದ ಕರ್ನಾಟಕ ರಾಜ್ಯದ ಸಹಕಾರಿ ಭಾರತಿಯ ರಾಜ್ಯಾಧ್ಯಕ್ಷರು ಹಾಗೂ ಸಹಕಾರ ಸಂಘಗಳ ನಿವೃತ ಅಪರ ನಿಬಂಧಕರಾದ ಶ್ರೀ ಎಮ್.ಜಿ.ಪಾಟೀಲ ಇವರು ಪ್ರಾಮಾಣಿಕ ಹಾಗೂ ನಿಷ್ಠೆ ಸೇವೆಯಿಂದ ಸಹಕಾರಿಗಳ ಪ್ರಗತಿ ಸಾಧ್ಯ ಎಂದರು. ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಬಾಪೂಜಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಎನ್. ಪಾಟೀಲರವರು ಮಾತನಾಡಿ ಸೌಹಾರ್ದ ಸಹಕಾರಿಗಳು ಸರಕಾರದ ಯಾವುದೇ ನೆರವು, ಸಹಾಯ ಪಡೆಯದೇ ಇರುವುದರಿಂದ ಅವರಿಗೆ ಹೆಚ್ಚಿನ ಮಾನ್ಯತೆ ಇದ್ದು, ಉತ್ತಮವಾಗಿ ಬೆಳೆಯಲು ಸಾಕಷ್ಟು ಅವಕಾಶಗಳಿವೆ, ಇವುಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಜಯಪುರದ ಸಿದ್ಧೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಉಪ್ಪಿನ ಇವರು ಮಾತನಾಡಿ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ನಷ್ಟ ಅನುಭವಿಸುತ್ತಿರುವ ಸಹಕಾರಿಗಳಿಗೆ ನಷ್ಟದಿಂದ ಹೊರಬಂದು ಪ್ರಗತಿಯಲ್ಲಿ ಕಾರ್ಯನಿರ್ವಹಿಸಲು ಸ್ತುತ್ಯವಾದ್ದು, ಈ ವಿಷಯದಲ್ಲಿ ಸಂಯುಕ್ತ ಸಹಕಾರಿಯು ರಾಜ್ಯದಲ್ಲಿನ ಎಲ್ಲಾ ಸೌಹಾರ್ದ ಸಹಕಾರಿಗಳ ಬಗ್ಗೆ ಕಾಳಜಿವಹಿಸುತ್ತಿದೆ ಎಂದರು. 50 ಸೌಹಾರ್ದ ಸಹಕಾರಿಗಳಿಂದ 84 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದುಕೊಂಡರು.

ಬೆಳಗಾವಿ ವಿಭಾಗದ ರಿಜನಲ್ ಮ್ಯಾನೇಜರ್ ಆದ ಶ್ರೀ ಜಿ.ಎಸ್. ಟೋಪಣ್ಣನವರು ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ನೆರವೇರಿಸಿದರು. ಕಾರ್ಯಕ್ರಮವನ್ನು ಕಿರಿಯ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ನಿರೂಪಿಸಿದರು. ಕಿರಿಯ ಸಹಾಯಕರಾದ ಶ್ರೀ ಗಂಗಾರಾಮ.ಎಸ್.ಕೊಳಾಪ್ಪೆರವರು ವಂದಿಸಿದರು.

## "ಪುನಃಶ್ಚೇತನ ತರಬೇತಿ" ಕಾರ್ಯಕ್ರಮ : ಚಾಣಕ್ಷತನದ ವ್ಯವಹಾರದಿಂದ ಲಾಭ ಗಳಿಸಲು ಸಾಧ್ಯ - ಶ್ರೀ ಜಯಾನಂದ ಬಾಬುರಾವ ಜಾಧವ

**ಬೆಳಗಾವಿ :** ಬೆಳಗಾವಿ ಜಿಲ್ಲೆಯಲ್ಲಿ ನಷ್ಟ ಅನುಭವಿಸುತ್ತಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ 25 ಜನವರಿ 2017ರಂದು ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯ ವತಿಯಿಂದ ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ನಷ್ಟದಿಂದ ಹೊರಬರಲು "ಪುನಃಶ್ಚೇತನ ತರಬೇತಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಾಬುರಾವ ಜಾಧವರವರು ಚಾಣಕ್ಷತನದಿಂದ ವ್ಯವಹಾರ ಮಾಡಿದಲ್ಲಿ ಮತ್ತು ನಿಷ್ಠೆಯಿಂದ ಆಡಳಿತ ನಿರ್ವಹಿಸಿದಲ್ಲಿ ಸಂಸ್ಥೆಯು ಲಾಭ ಗಳಿಸುವುದರೊಂದಿಗೆ ಉತ್ತಮ ಪ್ರಗತಿಯನ್ನು ಹೊಂದಲು ಸಾಧ್ಯ ಎಂದರು. ಕ್ರಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಸುಲ್ತಾನಪೂರೆ ಇವರು ಮಾತನಾಡಿ ನಷ್ಟಕ್ಕೆ ಆದ ಕಾರಣಗಳನ್ನು ಅಭ್ಯಸಿಸಿ, ಅವಲೋಕನ ಮಾಡಿ, ಲಾಭದಲ್ಲಿ ಕಾರ್ಯನಿರ್ವಹಿಸಲು ನಿರ್ದೇಶಕ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಯೋಜನೆಗಳನ್ನು ರೂಪಿಸಬೇಕಾಗಿದೆ ಎಂದರು. 61 ಸೌಹಾರ್ದ ಸಹಕಾರಿಗಳಿಂದ 76 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದುಕೊಂಡರು. ಬೆಳಗಾವಿ ವಿಭಾಗದ ರಿಜನಲ್ ಮ್ಯಾನೇಜರ್ ಆದ ಶ್ರೀ ಜಿ.ಎಸ್. ಟೋಪಣ್ಣನವರು ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ನೆರವೇರಿಸಿದರು. ಕಾರ್ಯಕ್ರವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ ಧರಣಿ ಇವರು ನಿರೂಪಿಸಿದರು. ಸಹಾಯಕರಾದ ಶ್ರೀ ವೆಂಕಟೇಶ ರಾಠೋಡ ವಂದಿಸಿದರು.

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 68ನೇ ಗಣರಾಜ್ಯೋತ್ಸವ ಆಚರಣೆ



**ಕೇಂದ್ರ ಕಛೇರಿ :** ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರಿಂದ ಧ್ವಜಾರೋಹಣ.



**ಬೆಳಗಾವಿ ವಿಭಾಗ :** ಶ್ರೀ ಮ.ನಿಂ.ಪ್ರಣವ ಸ್ವರೂಪಿ ಶ್ರೀ ಶ್ರೀ ಸಿದ್ಧರಾಮ ಸ್ವಾಮೀಜಿ, ನಾಗನೂರು ಮಠ, ಬೆಳಗಾವಿ ಇವರಿಂದ ಧ್ವಜಾರೋಹಣ.



**ಮೈಸೂರು ವಿಭಾಗ :** ಶ್ರೀಕೃಷ್ಣ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್ ನಾರಾಯಣ್ ರಾವ್‌ರವರು ಧ್ವಜಾರೋಹಣ.



**ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ :** ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರಿಂದ ಧ್ವಜಾರೋಹಣ.



**ಸುಯೋಗ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಮಹಾಲಿಂಗಪೂರ.**



**ಕಲಬುರಗಿ ವಿಭಾಗ :** ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿತಂಬರ್‌ರಾವ್ ಎಸ್. ಮಾಲೀಪಾಟೀಲ್ ರವರಿಂದ ಧ್ವಜಾರೋಹಣ.



ತಳವಗೇರಾ ಶ್ರೀ ಶರಣಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ತಳವಗೇರಾ ಸಹಕಾರಿಯಲ್ಲಿ ಶ್ರೀ ಪಂಪನಗೌಡ ಪೊಲೀಸ್ ಪಾಟೀಲರವರಿಂದ ಧ್ವಜಾರೋಹಣ.



ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯಲ್ಲಿ ಗದಗದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನ ಮ್ಯಾನೇಜರ್‌ರಾದ ಶ್ರೀ ಶ್ರೀಧರನ್.ಎನ್.ರವರಿಂದ ಧ್ವಜಾರೋಹಣ.



ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯಲ್ಲಿ ನಿರ್ದೇಶಕರಾದ ಶ್ರೀ ರಮೇಶ ಗಣಪತಿ ಕುಡತರಕರ ಇವರಿಂದ ಧ್ವಜಾರೋಹಣ.

## ಮುಂಬರುವ ಕಾರ್ಯಕ್ರಮಗಳು

### "ನಷ್ಟದಿಂದ ಲಾಭಗಳಿಕೆ" ತರಬೇತಿ ಹಾಗೂ ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳಿಗಾಗಿ ತರಬೇತಿ

**ಬೆಂಗಳೂರು ವಿಭಾಗ** : ದಿನಾಂಕ 09 ಫೆಬ್ರವರಿ 2017 ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ.), ಪದ್ಮನಾಭನಗರ, ಬೆಂಗಳೂರು ಇಲ್ಲಿ ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿನ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ "ನಷ್ಟದಿಂದ ಲಾಭಗಳಿಕೆ" ತರಬೇತಿಯನ್ನು ಮತ್ತು 2016-17ನೇ ಸಾಲಿನಲ್ಲಿ ಹೊಸದಾಗಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

### ಪುನಶ್ಚೇತನ ತರಬೇತಿ ಕಾರ್ಯಾಗಾರ

ಕಲಬುರಗಿ ವಿಭಾಗ : ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಫೆಬ್ರವರಿ ಮಾಹೆಯಲ್ಲಿ "ಪುನಶ್ಚೇತನ ತರಬೇತಿ ಕಾರ್ಯಗಾರ"ವನ್ನು ಗಂಗಾವತಿ, ಕೊಪ್ಪಳ ಜಿಲ್ಲೆ ಇಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

### ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ "ಕೌಶಲ್ಯ ಮತ್ತು ಸದಾಚಾರ ಅಭಿವೃದ್ಧಿ" ತರಬೇತಿ

ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ ದಿನಾಂಕ 11 ರಿಂದ 12 ಫೆಬ್ರವರಿ 2017ರವರೆಗೆ 2 ದಿನಗಳ "ಕೌಶಲ್ಯ ಮತ್ತು ಸದಾಚಾರ ಅಭಿವೃದ್ಧಿ" ತರಬೇತಿಯನ್ನು ಆಯೋಜಿಸಲಾಗಿದೆ.

### ಇ-ಸ್ಟ್ಯಾಂಪಿಂಗ್ ವಿಭಾಗದ ತರಬೇತಿಗಳು

ರಾಜ್ಯದಲ್ಲಿ ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ಮಾರ್ಚ್ ಮಾಹೆಯಲ್ಲಿ 14 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು, ತರಬೇತಿಯ ದಿನಾಂಕ, ಸ್ಥಳದ ವಿವರಗಳನ್ನು ಮುಂಬರುವ ದಿನಗಳಲ್ಲಿ ತಿಳಿಸಲಾಗುವುದು.

ಕಲಬುರಗಿ ವಿಭಾಗ

## ಪುನಶ್ಚೇತನ ತರಬೇತಿ ಕಾರ್ಯಾಗಾರ

**ಕಲಬುರಗಿ** : ಕಲಬುರಗಿ, ಬೀದರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪುನಶ್ಚೇತನ ತರಬೇತಿ"ಯನ್ನು ದಿನಾಂಕ 02 ಫೆಬ್ರವರಿ 2017ರಂದು ಹೋಟೆಲ್ ಗುಡ್‌ಲಕ್, ಕಲಬುರಗಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಾಗಾರದಲ್ಲಿ ಶ್ರೀ ರಘುನಂದನ್ ಕೆ ಹಾಗೂ ಶ್ರೀ ಬಿ.ವಿ.ರವೀಂದ್ರನಾಥ ಇವರುಗಳು ಉಪನ್ಯಾಸವನ್ನು ನೀಡಿದರು. ಕಲಬುರಗಿ, ಬೀದರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿನ 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿ, ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು.

ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ ಇವರು ನೆರವೇರಿಸಿದರು. ಕಾರ್ಯಾಗಾರದ ನಿರೂಪಣೆಯನ್ನು ಹಾಗೂ ವಂದನಾರ್ಪಣೆಯನ್ನು ಶ್ರೀ ಶಿವಕುಮಾರ್ ಬಿ.ಎಸ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು.

### ಇ-ಸ್ಟ್ಯಾಂಪಿಂಗ್ ಕೇಂದ್ರಗಳ ವ್ಯವಹಾರಗಳಲ್ಲಿ ಅವ್ಯವಹಾರ : ಕ್ರಿಮಿನಲ್ ಕೇಸ್

ಕಲಬುರಗಿ ಜಿಲ್ಲೆಯ ವಾಡಿಯಲ್ಲಿರುವ ಸ್ವಾವಲಂಬನೆ ಸೌಹಾರ್ದ ಸಹಕಾರಿಯು ನಿರ್ವಹಿಸುತ್ತಿರುವ ಇ-ಸ್ಟ್ಯಾಂಪಿಂಗ್ ಕೇಂದ್ರದಲ್ಲಿ ಅವ್ಯವಹಾರ ಕಂಡು ಬಂದಿರುವುದರಿಂದ ಕಲಬುರಗಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮುಂದಿನ ಕ್ರಮ ಜಾರಿಯಲ್ಲಿದೆ.

### ಎಚ್ಚರಿಕೆ ಕ್ರಮಕ್ಕೆ ಸೂಚನೆ

ರಾಜ್ಯದ ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ ಇ-ಸ್ಟ್ಯಾಂಪಿಂಗ್ ಕೇಂದ್ರಗಳು ಕಾನೂನು ರೀತಿಯಲ್ಲಿ ಕಾರ್ಯನಿರ್ವಹಿಸುವುದು. ಹಾಗೂ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸುವುದು ಅವಶ್ಯಕ. ಸಹಕಾರಿಗಳು ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ವ್ಯವಸ್ಥಿತವಾಗಿ ದಕ್ಷತೆಯಿಂದ ನಿರ್ವಹಿಸಲು ಸೂಚಿಸಿದೆ.

ಸರ್ಕಾರದಿಂದಾಗಲಿ, ಸಾರ್ವಜನಿಕರಿಂದಾಗಲಿ ಅಥವಾ ಯಾವುದೇ ಸಂಸ್ಥೆಯಿಂದಾಗಲಿ ಯಾವುದೇ ರೀತಿಯ ದೂರುಗಳು ಬಂದಲ್ಲಿ ತಕ್ಷಣವೇ ಕ್ರಮವಿಡಲಾಗುವುದು. ಈ ಅಂಶವನ್ನು ಎಲ್ಲಾ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಾರಟಗಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ ಸಹಕಾರಿಯ ನೂತನ ಕ್ಯಾಲೆಂಡರ್‌ಗಳನ್ನು ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಸಾಲೋಣಿ ಹಾಗೂ ನಿರ್ದೇಶಕರುಗಳು ಮತ್ತು ಗಣ್ಯರು ಬಿಡುಗಡೆಗೊಳಿಸಿದರು.



ಶ್ರೀ ಹೊಳಿಸಾಲ ದುರ್ಗಾದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ರಟ್ಟೀಹಳ್ಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಲ್ಲಿ ಶ್ರೀ ಹೊಳಿಸಾಲ ದುರ್ಗಾದೇವಿ ದೇವಸ್ಥಾನದ ಆವರಣವನ್ನು ಸ್ವಚ್ಛ ಮಾಡಲಾಯಿತು.



ಕಾಳಿದಾಸ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಸಂದರ್ಭದಲ್ಲಿ 2017ನೇ ಸಾಲಿನ ಕ್ಯಾಲೆಂಡರ್‌ಗಳ ಉದ್ಘಾಟನೆ ಮಾಡಲಾಯಿತು.



ಶ್ರೀ ಮಹಾಲಕ್ಷ್ಮೀ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೃಷ್ಣಾ–ಕಿತ್ತೂರ



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು



ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ



ದಿ. ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸವಣೂರು



ವಿಶ್ವಾಸ ಗ್ರಾಮೀಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು



ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ

## ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ 18ನೇ ಶಾಖೆಯ ಉದ್ಘಾಟನೆ




**ಧಾರವಾಡ :** ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ ಬ್ಯಾಂಕಿನ 18ನೇ ಶಾಖೆಯನ್ನು ಧಾರವಾಡದಲ್ಲಿ ದಿನಾಂಕ 16–01–2017ರಂದು ಶ್ರೀ ಧರ್ಮಸ್ಥಳ ಮಂಜುನಾಥ ಮೆಡಿಕಲ್ ಕಾಲೇಜ್ ಆಸ್ಪತ್ರೆ, ಸತ್ತೂರು, ಧಾರವಾಡ ಇದರ ಹಣಕಾಸು ನಿರ್ದೇಶಕರಾದ ಶ್ರೀ ವಿ.ಜಿ.ಪ್ರಭು, ಮಾನ್ಯ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಹಾಗೂ ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ಸುಕೋ ಬ್ಯಾಂಕಿನ ಈಗಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿ ಇವರುಗಳು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸುಕೋ ಬ್ಯಾಂಕಿನ ಮೊಬೈಲ್ ಆ್ಯಪ್ ಹಾಗೂ ಆನ್–ಲೈನ್ ಸಾಲದ ಮೊಬೈಲ್ ಆ್ಯಪ್‌ನ್ನು ಲೋಕಾರ್ಪಣೆ ಮಾಡಿದರು.



ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.




ಬೆಲ್ಲದ–ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ–ಬಾಗೇವಾಡಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಂ.ಕೆ.ಅಮ್ಮಣಗಿ ಇವರು ವಯೋ ನಿವೃತ್ತರಾದ ಹಿನ್ನೆಲೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಮತ್ತು ಸ್ಥಳೀಯ ಸಂಸ್ಥೆಗಳ ಪರವಾಗಿ ಬೀಳ್ಕೊಡುಗೆ.




## ರೋಯಲ್ ಸೌಹಾರ್ದ ಸಹಕಾರಿಯ ಉದ್ಘಾಟನೆ

**ಪುತ್ತೂರು :** ರೋಯಲ್ ಸೌಹಾರ್ದ ಸಹಕಾರಿ ನಿ., ಬೋಳುವಾರು ಸಹಕಾರಿಯನ್ನು ಕ್ಯಾಂಪ್ಕೋ ಮತ್ತು ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ್ ಬಿರಾದಾರ, ಸಹಕಾರಿಯ ಅಧ್ಯಕ್ಷರಾದ ಶ್ರೀ ದಂಬೆಕಾನ ಸದಾಶಿವ ರೈ ಮತ್ತು ಅನೇಕ ಗಣ್ಯರು ಉಪಸ್ಥಿತರಿದ್ದರು.

## ಶ್ರೀ ವಿಶ್ವಗುರು ಸೌಹಾರ್ದ ಸಹಕಾರಿಯ ಉದ್ಘಾಟನೆ

**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಚಿಕ್ಕಹಟ್ಟಿ ಹೊಳಿಯಲ್ಲಿ ಶ್ರೀ ವಿಶ್ವಗುರು ಸೌಹಾರ್ದ ಸಹಕಾರಿಯನ್ನು ವೇದಮೂರ್ತಿ ಶ್ರೀ ಚಂಬಯ್ಯ ಮಹಾಸ್ವಾಮಿಗಳು ಹಿರೇಮಠ ಇವರ ದಿವ್ಯ ಸಾನಿಧ್ಯದಲ್ಲಿ ಶ್ರೀ ಬಿ.ಸಿ.ಶೇಷಣ್ಣವರ, ನಿವೃತ್ತ ಶಿಕ್ಷಕರು, ಚಿಕ್ಕಹಟ್ಟಿಹೊಳಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಎಲ್ಲಾ ಸದಸ್ಯರು, ಗ್ರಾಮದ ಹಿರಿಯ ಮಾರ್ಗದರ್ಶಿಗಳು ಹಾಗೂ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.



## ಸೈಂಟ್ ಮಿಲಾಗ್ರಿಸ್ ಸೌಹಾರ್ದ ಸಹಕಾರಿಯ 46ನೇ ಶಾಖೆಯ ಉದ್ಘಾಟನೆ




**ಪುತ್ತೂರು :** ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ 46ನೇ ಶಾಖೆಯನ್ನು ಪುತ್ತೂರಿನ ಅವಿನ್ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಎಪಿಎಂಸಿ ರೋಡ್, ಪುತ್ತೂರಿನಲ್ಲಿ ಧರ್ಮಗುರುಗಳಾದ ವಂದನೀಯ ಫಾ. ಆಲ್‌ಫ್ರೆಡ್ ಪಿಂಟೋರವರು ಆಶೀರ್ವಚನದೊಂದಿಗೆ, ಪುತ್ತೂರು ವಿಧಾನಸಭಾ ಕ್ಷೇತ್ರದ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಮತಿ ಶಕುಂತಲಾ ಶೆಟ್ಟಿಯವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾರ್ಜ್ ಫರ್ನಾಂಡಿಸ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

## ಕ್ಯಾಲೆಂಡರ್ ಬಿಡುಗಡೆ



**ಬೆಂಗಳೂರು :** ಶ್ರೀಪದ್ಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ನೂತನ ವರ್ಷ 2017ರ ಕ್ಯಾಲೆಂಡರ್‌ನ್ನು ದಿನಾಂಕ 06–01–2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಳ್ಳು ಅನಂತರಾಜು.ಕೆ.ಆರ್.ರವರ ಅಧ್ಯಕ್ಷತೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಆರ್.ಲಿಂಗರಾಜು, ಡೆಪ್ಯುಟಿ ಡೈರೆಕ್ಟರ್, ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಶ್ರೀಮತಿ ಬಿ.ಜಿ.ಮಂಜುಳ, ಕೆ.ಸಿ.ಎಸ್., ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ–ಆಪರೇಟಿವ್ ಸೊಸೈಟೀಸ್, ರಾಮನಗರ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. “ಸಂಕ್ರಾಂತಿ ಸಂಭ್ರಮ” ಸಮಾರಂಭದ ಅಂಗವಾಗಿ ಭರತನಾಟ್ಯ, ಪುಣ್ಯಕೋಟಿ ನೃತ್ಯರೂಪಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 16ನೇ ಶಾಖೆಯ ಉದ್ಘಾಟನೆ

**ಸುರತ್ಕಲ್ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ ಸಹಕಾರಿಯ 16ನೇ ಶಾಖೆಯನ್ನು ದಿನಾಂಕ 16–01–2017ರಂದು ಸುರತ್ಕಲ್ ಟೌನ್ ಪಂಚಾಯತ್ ಮಾರುಕಟ್ಟೆ ಬಳಿಯಿರುವ ಸಿಟಿ ಪರ್ಲ್ ಕಾಂಪ್ಲೆಕ್ಸ್‌ನ ನೆಲಮಹಡಿಯಲ್ಲಿ ಮಂಗಳೂರಿನ ಮಾನ್ಯ ಸಂಸದರಾದ ಶ್ರೀ ನಳೀನ್ ಕುಮಾರ್ ಕಟೀಲ್‌ರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಮಾನ್ಯ ವಿಧಾನ ಪರಿಷತ್ ಮಾಜಿ ಸದಸ್ಯರಾದ ಶ್ರೀ ಕೆ.ಬಾಲಕೃಷ್ಣ ಭಟ್, ಸುರತ್ಕಲ್ ಸೇಕ್ರೆಡ್ ಹಾರ್ಟ್ ಚರ್ಚ್‌ನ ಧರ್ಮಗುರುಗಳಾದ ವಂದನೀಯ ಫಾ. ಪೌಲ್ ಪಿಂಟೋ, ಸಾಮಾಜಿಕ ಕಾರ್ಯಕರ್ತರು, ಎನ್ ಎಂ ಪಿ ಟಿ ಮಂಗಳೂರಿನ ಟ್ರಸ್ಟಿಯೂ ಆಗಿರುವಂತಹ ಶ್ರೀ ಸತ್ಯಜಿತ್ ಕುಳಾಯ್, ಮಣಿಪಾಲದ ನರಸಿಂಗೆಯ ಶ್ರೀ ನರಸಿಂಹ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಆನಂದ



ನಾಯಕ್‌ರವರುಗಳು ಆಗಮಿಸಿ, ಶುಭಹಾರೈಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಮತ್ತು ಸಹಕಾರಿಯ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ

ಸಹಕಾರ ಲೆಕ್ಕಪರಿಶೋಧನಾ ಇಲಾಖೆಯು ಪ್ರಕಟಿಸಿರುವ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿರುವ ಸನ್ನದು ಲೆಕ್ಕಪರಿಶೋಧಕರು/ ಸನ್ನದು ಲೆಕ್ಕಪರಿಶೋಧನಾ ಸಂಸ್ಥೆಯಿಂದ ಮಾತ್ರ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಮಾಡಿಸಬೇಕು, ಇಲ್ಲದಿದ್ದಲ್ಲಿ ಸದರಿ ಲೆಕ್ಕಪರಿಶೋಧನಾ ವರದಿಯು ಊರ್ಜಿತವಾಗುವುದಿಲ್ಲ. ಸನ್ನದು ಲೆಕ್ಕಪರಿಶೋಧಕರ ಪಟ್ಟಿಗಾಗಿ sahakaradarpana.kar.nic.in ಸಂಪರ್ಕಿಸುವುದು.

## ಜ್ಞಾನಶಾಲೆ ಸೌಹಾರ್ದ ಸಹಕಾರಿಯಿಂದ ಗ್ರಾಮೀಣ ಮಹಿಳೆಯರಿಗೆ ಸ್ವ-ಸಹಾಯ ಗುಂಪುಗಳ ಮೂಲಕ 40 ಲಕ್ಷ ರೂಪಾಯಿ ಸಾಲ ವಿತರಣೆ

ಚಾಮರಾಜನಗರ : ಜ್ಞಾನಶಾಲೆ ಸೌಹಾರ್ದ ಸಹಕಾರಿಯು ಚಾಮರಾಜನಗರ ಹಾಗೂ ಹೆಗ್ಗಡದೇವನ ಕೋಟೆಯಲ್ಲಿನ 40 ಹಳ್ಳಿಗಳಲ್ಲಿನ ಮಹಿಳೆಯರಿಗೆ ಸ್ವ-ಸಹಾಯ ಗುಂಪುಗಳ ಮೂಲಕ 40 ಲಕ್ಷ ರೂಪಾಯಿಗಳನ್ನು ಗೃಹ ಕೈಗಾರಿಕೆಗಳನ್ನು ಹಾಗೂ ಹೈನುಗಾರಿಕೆಯನ್ನು ನಿರ್ವಹಿಸಲು ಸಾಲ ನೀಡಲಾಗಿದೆ. ಸಾಲ ವಿತರಣಾ ಸಮಾರಂಭದಲ್ಲಿ ರಾಷ್ಟ್ರೀಯ ಸಹಕಾರಿ ನೇತಾರರಾದ ಶ್ರೀ ಸತೀಶ್ ಮರಾಠೆ, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ಹಿರಿಯ ಸಹಕಾರಿಗಳಾದ ಶ್ರೀ ರಮೇಶ್ ವೈದ್ಯ, ಶ್ರೀ ಅನಿಲ್ ಜೋಷಿ ಮುಂತಾದವರು ಉಪಸ್ಥಿತರಿದ್ದರು.




ಒಟ್ಟಾರೆ ಕಳೆದ ವರ್ಷದಲ್ಲಿ ಈ ರೀತಿ 3 ಕೋಟಿ ರೂಪಾಯಿಗಳನ್ನು ಸಾಲ ವಿತರಿಸಲಾಗಿದ್ದು, ಈ ಮೊತ್ತ ಸಂಪೂರ್ಣವಾಗಿ ಸಮಯಕ್ಕೆ ಸರಿಯಾಗಿ ಮರುಪಾವತಿಯಾಗಿರುವುದರಿಂದ ಮುಂದಿನ ವರ್ಷದಲ್ಲಿ 10,000 ಮಹಿಳೆಯರಿಗೆ 10 ಕೋಟಿ ರೂಪಾಯಿಗಳನ್ನು ಸಾಲ ವಿತರಿಸುವ ಯೋಜನೆ ಇದೆ ಎಂದು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಶ್ರೀಧರ ನೀಲಕಂಠ ರಾವ್‌ರವರು ತಿಳಿಸಿದ್ದಾರೆ.

## ಉಚಿತ ಆರೋಗ್ಯ ತಪಾಸಣೆ ಶಿಬಿರ



**ತಾವರಗೇರಾ :** ಚೇತನ ಪತ್ತಿನ ಸೌಹಾರ್ದ ಸಹಕಾರಿ ನಿ., ತಾವರಗೇರಾ, ಕೊಪ್ಪಳ ಸಹಕಾರಿಯ ಮಾಜಿ ಅಧ್ಯಕ್ಷರಾದ ದಿ॥ ಶ್ರೀ ಬಸವಗೌಡ ತಂದೆ ಅಮರೇಗೌಡ ಪಾಟೀಲ್ ಸಿಂಧನೂರು ಇವರ ಪ್ರಥಮ ವರ್ಷದ ಸ್ಮರಣಾರ್ಥವಾಗಿ ದಿನಾಂಕ 08-01-2017ರಂದು ಸಹಕಾರಿಯಲ್ಲಿ ಸಿಂಧನೂರು ತಾಲ್ಲೂಕು ವೈದ್ಯರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

## ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕೋತ್ಸವ



**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 3ನೇ ವಾರ್ಷಿಕೋತ್ಸವ ಸಮಾರಂಭವನ್ನು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಎಮ್ ಕವಟಗಿಮಠ ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಎಮ್ ಕವಟಗಿಮಠ, ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ, ನಿರ್ದೇಶಕರುಗಳು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಗಾಂವ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ ಪುನರಾಯ್ಕೆ



ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ
ಅಧ್ಯಕ್ಷರು



ಶ್ರೀ ಸುಭಾಷ ವಾಸುದೇವ ಶೆಟ್ಟಿ
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಜಯಗೌಡಾ ಮಲಗೌಡಾ ಪಾಟೀಲ, ಶ್ರೀ ಅಭಿನಂದನ ರಾವಸಾಹೇಬ ಪಾಟೀಲ, ಶ್ರೀ ಶರತಕುಮಾರ ಅಣ್ಣಾಸಾಬ ಲಡಗೆ, ಶ್ರೀ ಜಯವಂತ ವಿಲಾಸ ಪಾಟೀಲ, ಶ್ರೀ ಪೀರಗೌಡಾ ಕಲಗೌಡಾ ಪಾಟೀಲ, ಶ್ರೀ ಜಯಪಾಲ ಕಲ್ಲಪ್ಪಾ ನಾಗಾವೆ, ಶ್ರೀ ಅಭಯಕುಮಾರ ಶ್ರೀಪಾಲ ಕರೋಲೆ, ಶ್ರೀ ಭುಜಗೌಡಾ ಬಾಳಗೌಡಾ ಪಾಟೀಲ, ಶ್ರೀ ಅಪ್ಪಾಸಾಬ @ ಪ್ರಲ್ಹಾದ ತವಪ್ಪಾ ಕಡೋಲೆ, ಶ್ರೀಮತಿ ನಿರ್ಮಲಾ ಜಂಬು ಬಳ್ಳೋಳೆ, ಶ್ರೀಮತಿ ವಿಮಲ ಜೀವಂಧರ ಪಾಟೀಲ (ಭೋಜೆ), ಶ್ರೀ ಅಜೀತ ಶ್ರೀಪತಿ ಕಾಂಬಳೆ, ಶ್ರೀ ಬಾಬಾಸಾಬ ಶಾಬುದ್ದೀನ ಅಫರಾಜ, ಶ್ರೀ ಶ್ರೀಕಾಂತ ಮಾರುತಿ ವಸವಾಡಿ ಇವರುಗಳು ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಫಲಿತಾಂಶ ಪ್ರಕಟಣೆಯಲ್ಲಿ ತಿಳಿಸಲಾಗಿದೆ

### ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ಶರಣಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಳಿಂಗಳಿ



ಶ್ರೀ ಸದ್ಗುರು ಶಿವಾನಂದ ಶರಣಬಸವೇಶ್ವರ ಕಮರಿಮಠ ಅಧ್ಯಕ್ಷರು



ಶ್ರೀ ಸಹದೇವ ರಾಮಪ್ಪ ಬುಗಡಿ
ಉಪಾಧ್ಯಕ್ಷರು

### ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ



ಶ್ರೀ ಪಿ.ಜಿ.ರಾಜಶೇಖರ
ಅಧ್ಯಕ್ಷರು



ಶ್ರೀ ವಿ.ಶಿವಮೂರ್ತಿಸ್ವಾಮಿ
ಉಪಾಧ್ಯಕ್ಷರು



ಶ್ರೀ ವೀರಗಣೇಶ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ಆಡಳಿತ ಮಂಡಲಿಗೆ ನಿರ್ದೇಶಕರುಗಳ ಹಾಗೂ ಪದಾಧಿಕಾರಿಗಳ ಆಯ್ಕೆ.



ಶ್ರೀ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚಾಮರಾಜನಗರ ಸಹಕಾರಿಯ ಆಡಳಿತ ಮಂಡಲಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳ ಆಯ್ಕೆ

## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ವತಿಯಿಂದ ರಕ್ತದಾನ ಶಿಬಿರ



**ಬೆಂಗಳೂರು** : ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ಸಹಕಾರಿಯು ಮಹಾಯೋಗಿ ವೇಮನರ 605ನೇ ಜಯಂತ್ಯೋತ್ಸವದ ಪ್ರಯುಕ್ತ ರೆಡ್ಡಿ ಜನ ಸಂಘ, ಬೆಂಗಳೂರು ಉತ್ತರ ವಲಯ ಹಾಗೂ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 19.01.2017ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಯಲಹಂಕ ಉಪನಗರ ಇಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ರಕ್ತದಾನ ಶಿಬಿರದಲ್ಲಿ ಸುಮಾರು 700 ಜನ ಭಾಗವಹಿಸಿದ್ದರು.550 ರಕ್ತದಾನಿಗಳೂ ಹೆಸರುಗಳನ್ನು ನೋಂದಾಯಿಸಿ ಕೊಂಡಿದ್ದು, 406 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಯಲಹಂಕ ಕ್ಷೇತ್ರದ ಶಾಸಕರಾದ ಶ್ರೀ ಎಸ್.ಆರ್.ವಿಶ್ವನಾಥ, ಯಲಹಂಕ ಕ್ಷೇತ್ರದ ಬಿ.ಬಿ.ಎಂ.ಪಿ. ಸದಸ್ಯರಾದ ಶ್ರೀ ಸತೀಶ್ ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಮುನಿರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಎನ್.ವೇಮಾರೆಡ್ಡಿ ಹಾಗೂ ನಿರ್ದೇಶಕರುಗಳು ಪಾಲ್ಗೊಂಡಿದ್ದರು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

ಬಿ.ವಿ. ರವೀಂದ್ರನಾಥ
ಸನ್ನದು ಲೆಕ್ಕಪರಿಶೋಧಕರು, ಸಾಗರ.
9845460896, 73537655901

**ಪ್ರಶ್ನೆ 1 : ಲೆಕ್ಕಪರಿಶೋಧಕರ ಪಟ್ಟಿಯನ್ನು ಪ್ರತಿವರ್ಷ ಹೊಸದಾಗಿ ತಯಾರಿಸಬೇಕೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ನಿಯಮ 8 ಬಿ (5)ರ ಪ್ರಕಾರ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಪ್ರತಿ ವರ್ಷ ಆರ್ಥಿಕ ವರ್ಷ ಮುಕ್ತಾಯವಾದ ನಂತರ ಸಹಕಾರಿಗಳ ಲೆಕ್ಕಪರಿಶೋಧಕರ ಪಟ್ಟಿಯನ್ನು ಇಂದೀಕರಿಸುವುದು.

**ಪ್ರಶ್ನೆ 2 : ಒಮ್ಮೆ ಸೇರ್ಪಡೆಯಾದವರು ಪ್ರತಿವರ್ಷವೂ ಅರ್ಜಿ ಸಲ್ಲಿಸಬೇಕೇ?**

**ಉತ್ತರ :** ಒಮ್ಮೆ ಸೇರ್ಪಡೆಗೊಂಡ ಲೆಕ್ಕಪರಿಶೋಧಕರು ಅವರ ಗುಂಪು ಅಥವಾ ಸ್ಥಾನಮಾನ ವ್ಯತ್ಯಾಸವಾಗದಿದ್ದಲ್ಲಿ ಅರ್ಜಿ ಸಲ್ಲಿಸ ಬೇಕಾದ ಅಗತ್ಯವಿರುವುದಿಲ್ಲ.

**ಪ್ರಶ್ನೆ 3 : ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಅಪ್‌ಗ್ರೇಡ್ ಆಗುವ ಬಗೆ ಹೇಗೆ?**

**ಉತ್ತರ :** ಒಮ್ಮೆ ಪಟ್ಟಿಯಲ್ಲಿ ಲೆಕ್ಕಪರಿಶೋಧಕರು ಆ ಗುಂಪಿನಿಂದ ಮೇಲಿನ ಗುಂಪಿಗೆ ಹೋಗುವುದಾದಲ್ಲಿ ಸೇರ್ಪಡೆಗೊಳ್ಳಬೇಕಾದ ಸಂದರ್ಭದಲ್ಲಿ ಅವರು ತಮ್ಮ ಹಿಂದಿನ ಸ್ಥಾನಮಾನದ ವಿವರಗಳ ಸಹಿತ ಈಗ ಅಪೇಕ್ಷಿಸುವ ಸ್ಥಾನಮಾನಕ್ಕೆ ಪೂರಕ ದಾಖಲೆಗಳನ್ನು ಸಲ್ಲಿಸಿ ಅಪ್‌ಗ್ರೇಡ್ ಆಗಬಹುದು.

**ಪ್ರಶ್ನೆ 4 :** ಪಟ್ಟಿಯಿಂದ ತೆಗೆದುಹಾಕಲ್ಪಟ್ಟವರು ಈಗಾಗಲೇ ನೇಮಕಗೊಂಡಿರುವ ಇತರೆ ಸಹಕಾರಿಗಳ ಆಡಿಟ್ ಮಾಡಬಹುದೇ?

**ಉತ್ತರ :** ಇಲ್ಲ. ಒಬ್ಬ ಲೆಕ್ಕಪರಿಶೋಧಕನು ಯಾವುದೇ ಸಹಕಾರಿ ವರ್ಷದಲ್ಲಿ ಅನೇಕ ಸಹಕಾರಿಗಳ ಲೆಕ್ಕಪರಿಶೋಧನೆಗೆ ನೇಮಕಗೊಂಡಿದ್ದರೂ ವರ್ಷಾಂತ್ಯದಲ್ಲಿ ಅವನ ಹೆಸರು ಲೆಕ್ಕಪರಿಶೋಧಕರ ಪಟ್ಟಿಯಿಂದ ಕೈಬಿಟ್ಟಿದ್ದರೆ ಅವನು ಯಾವುದೇ ಸಹಕಾರಿ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಮಾಡುವಂತಿಲ್ಲ. ಪಟ್ಟಿಯಿಂದ ಕೈಬಿಟ್ಟಿರುವ ಪ್ರಕರಣವನ್ನು ಸೂಕ್ತವಾಗಿ ಕಾನೂನಿನಡಿ ಬಗೆಹರಿಸಿಕೊಂಡು ಪುನಃ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಮಾತ್ರ ಅವನು ಲೆಕ್ಕಪರಿಶೋಧನೆಯನ್ನು ಮಾಡಬಹುದಾಗಿರುತ್ತದೆ.

**ಪ್ರಶ್ನೆ 5 : ವರದಿಯನ್ನು ಕನ್ನಡದಲ್ಲೇ ನೀಡಬೇಕೇ?**

**ಉತ್ತರ :**

- ನಮ್ಮ ಸಹಕಾರ ಕಾಯ್ದೆಗಳು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದೆ.
- ಸರ್ಕಾರವು ಕನ್ನಡದಲ್ಲಿ ವ್ಯವಹರಿಸುವುದನ್ನು ಕಡ್ಡಾಯ ಮಾಡಿದೆ.
- ಹೆಚ್ಚಿನ ಸಹಕಾರಿಗಳು ಗ್ರಾಮೀಣ ಕರ್ನಾಟಕದಲ್ಲಿದೆ.
- ಹೆಚ್ಚಿನ ಸಹಕಾರಿ ಸದಸ್ಯರಿಗೆ ಕನ್ನಡ ಹೆಚ್ಚು ಅರ್ಥವಾಗುತ್ತದೆ.
- ಕನ್ನಡದಲ್ಲಿ ವರದಿಗಳಿದ್ದರೆ ಅವುಗಳ ಉದ್ದೇಶ ಈಡೇರುತ್ತದೆ.
- ಲೆಕ್ಕಪರಿಶೋಧನಾ ಇಲಾಖೆ ಕನ್ನಡದಲ್ಲಿಯೇ ವರದಿಯನ್ನು ಅಪೇಕ್ಷಿಸುತ್ತದೆ.
- ಕನ್ನಡದಲ್ಲಿರುವ ವರದಿಗಳ ಪಾಲನೆ, ಅನುಪಾಲನೆ, ಶೀಘ್ರದಲ್ಲಾಗಬಹುದು.

ಈ ಎಲ್ಲಾ ಕಾರಣಗಳಿಂದ ವರದಿಯನ್ನು ಕನ್ನಡದಲ್ಲಿಯೇ ನೀಡಬೇಕಿರುತ್ತದೆ.

## “ದಕ್ಕಿತೇಂ ಕುರುಪಾಂಡವತನಯರ್ಗೆ ರಾಜಸುಖ”



ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಆತುರದ ಕಾರ್ಯಗಳಾದ “ಕೂಸು ಹುಟ್ಟುವ ಮುನ್ನವೇ ಶಾಲೆ ನಿಗದಿಪಡಿಸಿ ಶುಲ್ಕ ಪಾವತಿಸುವುದನ್ನೂ” ಹಾಗೂ “ಹಣದ ಪ್ರಭಾವಲಯವಿರುವ ಇಲಾಖೆಗಳಲ್ಲಿ ತಮ್ಮ ಮಕ್ಕಳಿಗೆ ನೌಕರಿ ದೊರೆಯಬೇಕೆನ್ನುವ” ಅಂಶಗಳನ್ನು ಕಂಡು ಆಧ್ಯಾತ್ಮಿಕ ಚಿಂತಕರೂ, ಅನುಭಾವಿಗಳು, ಉತ್ತಮ ಸಮಾಜದ ನಿರೀಕ್ಷಕರೂ ಆಗಿದ್ದ ಡಿ.ವಿ.ಜಿ.ಯವರು ಮುಂದಿನ ಸಮಾಜದ ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಬೆಳಕು ಚೆಲ್ಲುವ ಪ್ರಭಾವಿ ಪದ್ಯವೊಂದನ್ನು ಬರೆಯುತ್ತಾ “ಬಾರದು ಬಪ್ಪದು, ಬಪ್ಪುದು ತಪ್ಪದು” ಎಂಬ ನಿರ್ಣಾಯಕ ಕಟುಸತ್ಯವನ್ನು “ದಕ್ಕಿತೇಂ ಕುರುಪಾಂಡವತನಯರ್ಗೆ ರಾಜ್ಯಸುಖ” ಎಂಬ ಫಲಪ್ರದ ಸತ್ಯವಾಕ್ಯದಲ್ಲಿ ಬರೆದಿದ್ದಾರೆ.

**“ಮಕ್ಕಳ ಭವಿಷ್ಯಕ್ಕಾಗಿ ಕಕ್ಕಲುತೆಗೊಳಬೇಡ**
**ಪಕ್ಕಾಗುವುದು ಭಾಗ್ಯವೆಂತೆಂತೋ ಜಗದಿ**
**ದಕ್ಕಿತೇಂ ಕುರುಪಾಂಡವತನಯರ್ಗೆ ರಾಜ್ಯಸುಖ**
**ದಿಕ್ಕವರಿಗವರವರೆ ಮಂಕುತಿಮ್ಮ”**

ಅತಿರಥ ಮಹಾರಥರುಗಳಾದ ದ್ರೋಣ, ಭೀಷ್ಮ, ಅಶ್ವತ್ಥಾಮ, ಕರ್ಣ ಇತ್ಯಾದಿಯಲ್ಲದೇ 18 ಅಕ್ಷೋಹಿಣಿ ಸೈನ್ಯವಿದ್ದರೂ ಕೌರವರಿಗೆ ರಾಜ್ಯ ಲಭ್ಯವಾಗಲಿಲ್ಲ, ಅಂತೆಯೇ ಪಾಂಡವರಿಗೂ ರಾಜ್ಯ ಸುಖ ಸಕಾಲದಲ್ಲಿ ಸಿಗಲೇ ಇಲ್ಲ. ಅವರವರು ಪಡೆದುಕೊಂಡಂತಹ ಭಾಗ್ಯ ಮಾತ್ರ ಖಂಡಿತ ದೊರೆಯುತ್ತದೆ ಎಂದೂ ಮಕ್ಕಳ ಭವಿಷ್ಯದ ಬಗ್ಗೆ ಅತಿಯಾದ ಹಾಗೂ ಆತುರದ ನಿರೀಕ್ಷೆಗಳು ಬೇಡವೆಂದು ತಂದೆತಾಯಿಗಳಿಗೆ ಸೂಕ್ತ ವಿಚಾರವನ್ನು ನೀಡುತ್ತಿದ್ದಾರೆ. ಉತ್ತಮ ಸಮಾಜ ನಿರ್ಮಾಣದ ಗುರಿ ಹೊತ್ತವರೆಲ್ಲರೂ ಕಾತರತೆ ಉದ್ವೇಗಗಳಿಲ್ಲದೇ ಸದಾಶಯವನ್ನಿಟ್ಟುಕೊಂಡು ಅವಶ್ಯಕವಾದ ವಿಚಾರವನ್ನು ಗ್ರಹಿಸಿ, ರಾಮಾಯಣದ ರಾಮ ಲಕ್ಷ್ಮಣ ಭರತರಂತೆ ಸಹೋದರತ್ವದ ಬದುಕನ್ನು ಕಲಿತು ಅಂದರೆ ಸಹಕಾರದಿಂದ ಬದುಕಿ ಎಲ್ಲರ ಬದುಕನ್ನು ಹಸನುಗೊಳಿಸಿಕೊಳ್ಳಿ ಎಂಬುದು ಇದರ ಸಾರಾಂಶವಾಗಿದೆ.

ಈ ಪದ್ಯ ಅಬ್ರಹಾಂ ಲಿಂಕನ್‌ರವರು ತನ್ನ ಮಗನ ಗುರುಗಳಿಗೆ ಪತ್ರ ಬರೆದು ತನ್ನ ಮಗನನ್ನು ಈ ರೀತಿ ಅನುಭವೇದ್ಯ ಜ್ಞಾನ ಸಂಪನ್ನನಾಗಿಸಿರೆಂದು ಕೇಳಿಕೊಂಡಿರುವುದು. ಆ ಪತ್ರದ ಅಂಶಗಳು ಈ ಕೆಳಗಿನಂತಿವೆ.

1. ಈ ಜಗತ್ತು ಪಂಡಿತ ಪಾಮರದಿಂದ, ಭ್ರಷ್ಟಾಚಾರಿ ಶಿಷ್ಟಾಚಾರಿ, ಅನ್ಯಾಯಕಾರಿ ಸಂಪನ್ನ ಎಂಬಿತ್ಯಾದಿ ಅಸಮಾನತೆಯಿಂದ ಕೂಡಿದೆ ಇದರೊಳಗೆ ಒಳಿತನ್ನು ಆಯ್ಕೆ ಮಾಡುವ ಗುಣ ಬರಿಸಲು ಜ್ಞಾನ ನೀಡಿ.
2. ದುಡಿಮೆಯ ಬೆಲೆಯನ್ನು ತಿಳಿಸಿ, ವ್ಯರ್ಥ ವೆಚ್ಚಗಳನ್ನು ಕಡಿತಗೊಳಿಸಿ, ಅವಶ್ಯಕವಾದುದಕ್ಕೆ ವೆಚ್ಚ ಮಾಡಲು ತಿಳಿಸಿ.
3. ಸೋಲು ಗೆಲುವು ದ್ವಂದ್ವಗಳಲ್ಲಿ ಸ್ಥಿರಚಿತ್ತನಾಗಿರಲು ತಿಳಿಸಿ.
4. ಹೃತ್ಪೂರ್ವಕ ನಗುವಿನ ರಹಸ್ಯವನ್ನು ತಿಳಿಸುತ್ತಾ ಕಪಟದ ನಗುವನ್ನು ಅರ್ಥೈಸಿಕೊಳ್ಳುವಂತೆ ತಿಳಿಸಿ.
5. ಅಸೂಯೆಹಾಗೂಮತ್ಸರತೆಗಳಿಂದ ದೂರವಿರುವುದನ್ನು ತಿಳಿಸಿ.
6. ಪುಸ್ತಕದೊಂದಿನಿಂದ ದೊರೆಯುವ ಪರಮಾಶ್ಚರ್ಯ ಹಾಗೂ ಸಂತಸಗಳನ್ನು ತಿಳಿಸಿ.
7. ನಿಸರ್ಗದ ಪಕ್ಷಿ ಪ್ರಭೇದಗಳು ಹಾಗೂ ಸಸ್ಯಕಾಶಿಗಳ ಬಗ್ಗೆ ತಿಳಿಸಿ.
8. ಕಾಪಿ ಹೊಡೆಯುವುದಕ್ಕಿಂತ ಫೇಲಾಗಿ, ಪ್ರಯತ್ನಿಸಿ ಮೇಲೆ ಬರುವುದರ ರಹಸ್ಯ ತಿಳಿಸಿ.
9. ತನ್ನ ಯೋಚನಾ ಲಹರಿ ಸರಿಯಿಲ್ಲವೆಂದು ಯಾರಾದರೂ ತಿಳಿಸಿದರೆ ಅದನ್ನು ಬದಿಗೊತ್ತಿ ತಾನು ನಂಬಿದ ತತ್ವಗಳಿಗೆ ನಿಷ್ಠೆಯಿಂದಿರಲು ತಿಳಿಸಿ.
10. ಮೃದು ಸ್ವಭಾವದವರೊಡನೆ ಮೃದುವಾಗಿ, ಕಠಿಣ ಸ್ವಭಾವದವರೊಡನೆ ಕಠಿಣವಾಗಿರುವುದನ್ನು ತಿಳಿಸಿ.
11. ಗುಂಪಿನಲ್ಲಿ ಗೋವಿಂದಾ ಎಂಬ ಭಾವ ಬಾರದಂತೆ ಎಚ್ಚರಿಸಿ.
12. ಮುಕ್ತ ಮನಸ್ಸಿನಿಂದ ಕೇಳುವುದನ್ನು ಕಲಿಸಿ ಏಕೆಂದರೆ ಉತ್ತಮವಾಗಿ ಕೇಳುವುದರಿಂದ ಮನುಷ್ಯ ಬೆಳೆಯುತ್ತಾನೆ.
13. ಕೇಳಿದ ನಂತರ ಉತ್ತಮಾಂಶಗಳನ್ನು ಅನುಷ್ಠಾನಕ್ಕೆ ತರಲು ತಿಳಿಸಿ.
14. ದುಃಖದ ಸನ್ನಿವೇಶದಲ್ಲಿಯೂ ನಗು ಚೆಲ್ಲುವುದು ಹೇಗೆಂದು ತಿಳಿಸಿ.
15. ಕಣ್ಣೀರಿಡುವ ಪ್ರಸಂಗ ಬಂದರೆ ನಾಚಿಕೊಳ್ಳಬಾರದೆಂದು ತಿಳಿಸಿ.
16. ತಾಳ್ಮೆ ಕಳೆದುಕೊಳ್ಳುವ ಸಂದರ್ಭದಲ್ಲಿ ಧೈರ್ಯದಿಂದಿರುವುದನ್ನು ತಿಳಿಸಿ.
17. ಕ್ಷಮಿಸಿ ಕಾಪಾಡುವ ಮನ್ನಿಸಿ ಮುನ್ನಡೆಸುವ ಹರಸಿ ಹಾರೈಸುವ ಸೃಷ್ಟಿಸ್ಥಿತಿಲಯ ಕರ್ತನಲ್ಲಿ ದೃಢ ನಂಬಿಕೆಯಿಡಲು ತಿಳಿಸಿ.
18. ಮನುಕುಲದ ಮೇಲೆ ನಂಬಿಕೆ ಹಾಗೂ ಕರುಣೆಯಿಡಲು ತಿಳಿಸಿ.

ಇಷ್ಟು ಅಂಶಗಳು ಬರುವಂತೆ ಪತ್ರ ಬರೆದು ಅವರು “ಪತ್ರ ಉದ್ದವಾಯಿತು ಆದರೂ ಇಷ್ಟಲ್ಲದೇ ಮಾನವತೆಯ ಸಂಪೂರ್ಣತೆಯನ್ನು ಮುಟ್ಟಲಾಗುವುದಿಲ್ಲ” ಎಂದು ಪತ್ರವನ್ನು ಮುಕ್ತಾಯಗೊಳಿಸುತ್ತಾರೆ.

ಅಂದರೆ ಪೋಷಕರುಗಳಾದ ನಾವುಗಳೆಲ್ಲರೂ ನಿಜ ಕರ್ತವ್ಯಗಳನ್ನರಿತು, ಸತ್ಯನಿಷ್ಠವಾದ ಗುರಿಗಳನ್ನು ಹೊಂದಿ ಭಗವಂತನಲ್ಲಿ ನಂಬಿಕೆಯಿಟ್ಟು ನಡೆದಲ್ಲಿ ಆಶಿತ ಫಲಗಳು ದೊರೆಯುತ್ತವೆಂಬುದು ಅವರ ಹಾಗೂ ಹಿಂದಿನ ಎಲ್ಲಾ ಚಿಂತನಾಶೀಲರ ಅಭಿಪ್ರಾಯ. ಗುಣಾತ್ಮಕ ಶಿಕ್ಷಣಕ್ಕೆ ಹಾಗೂ ಮಾನವ ಪ್ರತಿಭಾ ಬೆಳವಣಿಗೆಗೆ ಗಮನ ನೀಡಿ ಉತ್ತಮ ಸಹಕಾರಿಗಳಾಗೋಣ, ತನ್ಮೂಲಕ ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳೋಣವೆಂಬುದು ಡಿ.ವಿ.ಜಿ.ಯವರ ಆಶಯವಾಗಿದೆ.

# ಲೆಕ್ಕಪರಿಶೋಧನೆ

ಶರಣಪ್ಪಾ ರೋಜಾ, ಸಹಾಯಕ ನಿಬಂಧಕರು (ನಿವೃತ್ತ), ಕಲಬುರಗಿ, ಮೊ : 9945297608

ಪ್ರತಿ ವರ್ಷ ಸಹಕಾರಿ ಸಂಸ್ಥೆಯು ಕೈಕೊಳ್ಳುವ ವ್ಯವಹಾರದ ಲೆಕ್ಕಪರಿಶೋಧನೆ ಮಾಡಿಸುವ ಶಾಸನಬದ್ಧ ಜವಾಬ್ದಾರಿ ಆಯಾ ಸಹಕಾರಿ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕರು ಮತ್ತು ಆಡಳಿತ ಮಂಡಲಿಯದ್ದಾಗಿರುತ್ತದೆ. ಸಹಕಾರಿ ಸಂಸ್ಥೆಯ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸದೇ ಇದ್ದರೆ ಅದು ಕಾನೂನಿನ ಅಡಿ ಅಪರಾಧವಾಗುತ್ತದೆ.

ಲೆಕ್ಕಪರಿಶೋಧನಾ ವರದಿಯು ಸಹಕಾರಿ ಸಂಸ್ಥೆಯು ಲಾಭದಲ್ಲಿ ನಡೆದಿದೆಯೇ? ಅಥವಾ ಹಾನಿಯಲ್ಲಿ ನಡೆದಿದೆಯೇ? ಎನ್ನುವ ಬಗ್ಗೆ ಮತ್ತು ಸಹಕಾರಿ ಸಂಸ್ಥೆಯಲ್ಲಿ ಹಣದ ಅಪರಾ–ತಪರಾ, ಇನ್ನಿತರ ಲೆಕ್ಕಪತ್ರಕ್ಕೆ ಸಂಬಂಧಿಸಿದ ನ್ಯೂನತೆ ಮತ್ತು ಆಡಳಿತಾತ್ಮಕ ನ್ಯೂನತೆಗಳ ಬಗ್ಗೆ ಸ್ಪಷ್ಟ ಮತ್ತು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಅಲ್ಲದೇ, ಸಂಸ್ಥೆಯ ಆರ್ಥಿಕ ಆರೋಗ್ಯದ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಸಹಕಾರಿ ಸಂಸ್ಥೆಯಲ್ಲಿ ಲೆಕ್ಕಪರಿಶೋಧನಾ ವರ್ಷದಲ್ಲಿ ಉಂಟಾಗಿರಬಹುದಾದ ಲೆಕ್ಕಪತ್ರಕ್ಕೆ ಸಂಬಂಧಿಸಿದ, ಆಡಳಿತಕ್ಕೆ ಸಂಬಂಧಿಸಿದ ಮತ್ತು ಹಣಕಾಸಿನ ಅವ್ಯವಹಾರಗಳು ಏನಾದರೂ ಸಂಭವಿಸಿದಲ್ಲಿ ಅವುಗಳನ್ನು ಸರಿಪಡಿಸುವ ಅವಕಾಶ ಆಡಳಿತ ಮಂಡಲಿಗೆ ಲೆಕ್ಕಪರಿಶೋಧನಾ ವರದಿ ನೀಡುತ್ತದೆ. ಅಲ್ಲದೇ, ಸಂಸ್ಥೆಯ ಹಣಕಾಸಿನ ಆರೋಗ್ಯವನ್ನು ಕಾಪಾಡುವಲ್ಲಿ ಸಹಕಾರಿಯಾಗುತ್ತದೆ.

ಲೆಕ್ಕಪರಿಶೋಧನಾ ವರದಿ ಪ್ರತಿಯೊಬ್ಬ ಸಹಕಾರಿ ಸಂಸ್ಥೆಯ ಸದಸ್ಯನಿಗೆ ಸಹಕಾರಿಯಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ಸ್ಪಷ್ಟ ಚಿತ್ರಣ ಒದಗಿಸಿ, ಪಾರದರ್ಶಕ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಸಹಕಾರಿಯಾಗುತ್ತದೆ ಎನ್ನುವುದು ಗಮನಾರ್ಹವಾದ ಅಂಶ.

ಇತ್ತೀಚಿಗೆ ಸಹಕಾರ ಕಾನೂನಿಗೆ ತಿದ್ದುಪಡಿ ಮಾಡಿದ ನಂತರ ಸಹಕಾರಿ ಸಂಸ್ಥೆಯ ಆಡಳಿತ ಮಂಡಲಿಯವರಿಗೆ ತಮ್ಮ ಸಹಕಾರಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಯಾವ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಬೇಕು (ಲೆಕ್ಕಪರಿಶೋಧನಾ ನಿರ್ದೇಶಕರು ಅನುಮೋದಿಸಿದ ಪಟ್ಟಿಯಲ್ಲಿರುವ ಲೆಕ್ಕಪರಿಶೋಧಕರು/ಚಾರ್ಟರ್ಡ್ ಅಕೌಂಟೆಂಟ್) ಎನ್ನುವ ಬಗ್ಗೆ ಮುಕ್ತ ಅವಕಾಶ ಲಭಿಸಿ ಕೊಡುತ್ತದೆ.

ಸದರಿ ತಿದ್ದುಪಡಿಯ ನಂತರ ಬಹಳಷ್ಟು ಸಹಕಾರಿ ಸಂಸ್ಥೆಗಳು ತಮ್ಮ ಸಹಕಾರಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಮಾಡಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಚಾರ್ಟರ್ಡ್ ಅಕೌಂಟೆಂಟ್ ಇವರು ಲೆಕ್ಕಪತ್ರಗಳ ಪರಿಶೀಲನೆ ಕುರಿತಂತೆ ತಾಂತ್ರಿಕ ಪರಿಣಿತಿ ಹೊಂದಿರುವುದರಲ್ಲಿ ಎರಡು ಮಾತಿಲ್ಲ.

ಸಹಕಾರಿ ಸಂಸ್ಥೆಗಳ ಲೆಕ್ಕಪರಿಶೋಧನೆಯು ಎರಡು ಮುಖ್ಯವಾದ ಅಂಶಗಳನ್ನು ಒಳಗೊಂಡಿರುತ್ತದೆ. ಒಂದು ಲೆಕ್ಕಪತ್ರಗಳ ಪರಿಶೀಲನೆ ಭಾಗ, ಇನ್ನೊಂದು ಆಡಳಿತಾತ್ಮಕವಾದಂತಹ ಲೋಪದೋಷಗಳ ಪರಿಶೀಲನೆ. ಆದರೆ, ಸಹಕಾರಿ ಸಂಸ್ಥೆಗಳ ಇತ್ತೀಚಿನ ಲೆಕ್ಕಪರಿಶೋಧನಾ ವರದಿಗಳನ್ನು ಗಮನಿಸಿದಾಗ ಲೆಕ್ಕಪರಿಶೋಧಕರು ಅದರಲ್ಲೂ ವಿಶೇಷವಾಗಿ ಚಾರ್ಟರ್ಡ್ ಅಕೌಂಟೆಂಟ್ ಆದವರು ಕೇವಲ ಲೆಕ್ಕಪತ್ರಗಳ ಪರಿಶೀಲನೆಗೆ ಹೆಚ್ಚು ಒತ್ತು ನೀಡುತ್ತಿರುವುದು ಮತ್ತು ಆಡಳಿತಾತ್ಮಕ ಅಂಶಗಳ ಬಗ್ಗೆ ಹೆಚ್ಚಿನ ಗಮನಹರಿಸದೇ ಇರುವುದು ಕಂಡು ಬರುತ್ತದೆ. ಆದ್ದರಿಂದ, ಲೆಕ್ಕಪರಿಶೋಧಕರು ಈ ಕೆಳಗೆ ವಿವರಿಸಿದ ಕೆಲವೊಂದು ಮುಖ್ಯವಾದ ಆಡಳಿತಾತ್ಮಕವಾದ ಅಂಶಗಳ ಕಡೆಗೆ ಗಮನಹರಿಸಿ ಇವುಗಳ ಬಗ್ಗೆ ಕೂಡಾ ವರದಿಸುವುದರಿಂದ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿಗೆ ಅನುಕೂಲವಾಗುತ್ತದೆ ಮತ್ತು ಲೆಕ್ಕಪರಿಶೋಧನೆ ವರದಿ ಪರಿಪೂರ್ಣ ಗುಣಮಟ್ಟದಲ್ಲಿರುತ್ತದೆ ಎಂದು ಕೂಡಾ ಭಾವಿಸಬಹುದಾಗಿದೆ.

ಮೂಲತಃ ಸಹಕಾರಿ ಸಂಸ್ಥೆಗಳು ಸಹಕಾರಿ ಕಾನೂನು, ನಿಯಮ ಮತ್ತು ನೋಂದಾಯಿತ ಬೈಲಾ ಅವಕಾಶಗಳಿಗನುಗುಣವಾಗಿ ಆಡಳಿತ ನಿರ್ವಹಿಸುತ್ತವೆ. ಆದ್ದರಿಂದ, ಈ ಕೆಳಗೆ ವಿವರಿಸಿದ ಆಡಳಿತಾತ್ಮಕ ವಿಷಯಗಳ ಕಡೆಗೆ ಕೂಡಾ ಲೆಕ್ಕಪರಿಶೋಧಕರು ಗಮನ ಹರಿಸಿ ಈ ಕುರಿತು ಉಂಟಾದ ನ್ಯೂನತೆಗಳ ಬಗ್ಗೆ ವರದಿಯಲ್ಲಿ ನಮೂದಿಸುವುದು ಮುಖ್ಯವಾಗಿರುತ್ತದೆ.

1) ಬೈಲಾ ಅವಕಾಶಗಳಲ್ಲಿಯ ಉದ್ದೇಶಗಳ ಅನುಷ್ಠಾನ ಕೈಕೊಳ್ಳಲಾಗುತ್ತಿದೆಯೇ?
2) ಆಡಳಿತ ಮಂಡಲಿಯ ನಿರ್ದೇಶಕರು ಕಟಬಾಕಿದಾರರಾಗಿದ್ದಾರೆಯೇ? ಅಥವಾ ನಿರಂತರ 3 ಆಡಳಿತ ಮಂಡಲಿಯ ಸಭೆಗೆ ಗೈರು ಹಾಜರಾಗಿ ಅನರ್ಹತೆಗೆ ಒಳಗಾಗಿದ್ದಾರೆಯೇ?
3) ಆಡಳಿತ ಮಂಡಲಿಯವರು ಯಾವುದಾದರೂ ಕಾನೂನು ಬಾಹಿರ ನಿರ್ಣಯ ಅಂಗೀಕರಿಸಿ ಸಂಸ್ಥೆಗೆ ಹಾನಿ ಉಂಟು ಮಾಡಿದ್ದಾರೆಯೇ?
4) ಕಟಬಾಕಿದಾರ ಸದಸ್ಯರ ವಿರುದ್ಧ ಕಾನೂನು ಕ್ರಮ ಕೈ–ಕೊಂಡಿದ್ದಾರೆಯೇ?
5) ಸಹಕಾರ ಕಾನೂನಿನ ನಿಯಮಗಳಿಗೆ ಅನುಸಾರವಾಗಿ ಆಡಳಿತ ಮಂಡಲಿಯ ಸಭೆಗಳನ್ನು ನಡೆಸುತ್ತಿದ್ದಾರೆಯೇ?

6) ಆಡಳಿತ ಮಂಡಲಿಯಲ್ಲಿ ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಪಾಲನಾ ವರದಿ ಮಂಡಿಸಿ ಚರ್ಚಿಸಲಾಗಿದೆಯೇ?
7) ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ವಾರ್ಷಿಕ ಮಹಾ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?
8) ಪ್ರತಿ ವರ್ಷ ಕಾನೂನಿನ ಅವಕಾಶಕ್ಕನುಗುಣವಾಗಿ ವಾರ್ಷಿಕ ಮಹಾ ಸಭೆ ಜರುಗಿಸಿದ್ದಾರೆಯೇ? ಮತ್ತು ವಾರ್ಷಿಕ ಮಹಾ ಸಭೆಯ ವಿಷಯ ಸೂಚಿ ಪಟ್ಟಿ ಕಾನೂನಿನಲ್ಲಿ ತಿಳಿಸಿದಂತೆ ತಯಾರಿಸಿ ಅದರ ಮೇರೆಗೆ ವಾರ್ಷಿಕ ಮಹಾ ಸಭೆಯಲ್ಲಿ ಚರ್ಚಿಸಿದ್ದಾರೆಯೇ?
9) ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಪಾಲನಾ ವರದಿ ಲೆಕ್ಕಪರಿಶೋಧನಾ ನಿರ್ದೇಶಕರು/ನಿಬಂಧಕರಿಗೆ ನಿಗದಿತ ಅವಧಿಯ ಒಳಗೆ ಸಲ್ಲಿಸಿದ್ದಾರೆಯೇ?
10) ಆಡಳಿತ ಮಂಡಲಿಯವರು ಇನ್ನಿತರ ವರದಿಗಳನ್ನು ಅಂದರೆ ವಾರ್ಷಿಕ ಮಹಾ ಸಭೆಯ ನಡುವಳಿಕೆಯ, ಆಡಳಿತ ಮಂಡಲಿಯ ಸಭೆಯ ನಡವಳಿಕೆಗಳು ಮತ್ತು ಇತರ ವರದಿಗಳನ್ನು ನಿಬಂಧಕರಿಗೆ ಕಾನೂನಿನಲ್ಲಿ ತಿಳಿಸಿದಂತೆ, ನಿಗದಿತ ಅವಧಿಯಲ್ಲಿ ಸಲ್ಲಿಸುತ್ತಿದ್ದಾರೆಯೇ?
11) ಇತ್ತೀಚಿಗೆ ಸಹಕಾರ ಕಾನೂನಿಗೆ 2013, 2014, 2015, 2016ರಲ್ಲಿ ತಿದ್ದುಪಡಿಗಳ ಮೂಲಕ ಸಾಕಷ್ಟು ಬದಲಾವಣೆಗಳನ್ನು ತಂದಿದ್ದು, ಸದರಿ ತಿದ್ದುಪಡಿಗಳ ಅನುಸಾರವಾಗಿ ಸಹಕಾರಿ ಸಂಸ್ಥೆಗಳು ಬೈಲಾ ತಿದ್ದುಪಡಿ ಮಾಡಿಕೊಂಡಿರುತ್ತವೆಯೇ?

## ಸನ್ನದು ಲೆಕ್ಕಪರಿಶೋಧಕರು ಹಾಗೂ ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಅಂಶಗಳು

### ಲೆಕ್ಕಪರಿಶೋಧಕರ ಆಯ್ಕೆ : ನಿಯಮ 8 ಬಿ (6)

ಪ್ರತಿ ಸಹಕಾರಿಯ ಸಾಮಾನ್ಯ ನಿಕಾಯವು ಸಹಕಾರ ಲೆಕ್ಕಪರಿಶೋಧನಾ ಇಲಾಖಾ ಅಂತರ್ಜಾಲ ತಾಣದಲ್ಲಿ ಸಹಕಾರಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಲುವಾಗಿ ಪ್ರಚುರಪಡಿಸಿರುವ ಅರ್ಹ ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ಸಂಸ್ಥೆಗಳ ಪಟ್ಟಿಯಲ್ಲಿನ ಆಯಾ ಲೆಕ್ಕಪರಿಶೋಧಕರುಗಳ ಗುಂಪಿನಿಂದ ಲೆಕ್ಕಪರಿಶೋಧನಾ ಸಂಸ್ಥೆ/ ಲೆಕ್ಕಪರಿಶೋಧಕರನ್ನು (ಚಾರ್ಟರ್ಡ್ ಅಕೌಂಟೆಂಟ್ ಅಥವಾ ಇಲಾಖಾ ಲೆಕ್ಕಪರಿಶೋಧಕರು/ ಸಿಬ್ಬಂದಿ) ಆಯ್ಕೆ ಮಾಡಿಕೊಳ್ಳತಕ್ಕದ್ದು.

### ಲೆಕ್ಕಪರಿಶೋಧಕರ ನೇಮಕಾತಿಯ ಬಗ್ಗೆ ಸೂಚನೆ : ನಿಯಮ 8 ಬಿ (8)

ಯಾವುದೇ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಾಮಾನ್ಯ ಸಭೆ ನಡೆಸಿದ ಏಳು ದಿವಸಗಳೊಳಗಾಗಿ ಸಾಮಾನ್ಯ ಸಭೆಯಲ್ಲಿ ನೇಮಕಗೊಂಡ ಲೆಕ್ಕಪರಿಶೋಧಕ/ ಲೆಕ್ಕಪರಿಶೋಧಿತ ಸಂಸ್ಥೆಗಳಿಗೆ, ಅಂಥಾ ನೇಮಕಾತಿಯ ಬಗ್ಗೆ ತಿಳಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನಾ ನಿರ್ದೇಶಕರಿಗೂ ಸದರಿ ಮಾಹಿತಿಯನ್ನು ನೀಡತಕ್ಕದ್ದು.

### ಹೊಸ ಸಹಕಾರಿಯ ಲೆಕ್ಕಪರಿಶೋಧನೆ : ನಿಯಮ 8 ಬಿ (9)

ಯಾವುದೇ ಸಹಕಾರಿಯು ಹೊಸದಾಗಿ ನೋಂದಾಯಿಸಿದಾಗ ಆ ಸಹಕಾರಿಯು ಮೊದಲ ಸಾಮಾನ್ಯ ನಿಕಾಯದ ಸಭೆಯಲ್ಲಿ ಸಹಕಾರ ಲೆಕ್ಕಪರಿಶೋಧನಾ ಇಲಾಖಾ ಅಂತರ್ಜಾಲದಲ್ಲಿ ಪ್ರಚುರ ಪಡಿಸಿರುವ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಲ್ಲಿನ ಆಯಾ ಗುಂಪಿನಲ್ಲಿನ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

### ನೇಮಕಾತಿ ಮಾಡುವಲ್ಲಿ ವಿಫಲವಾದಲ್ಲಿ : ಕಲಂ 33 (2)

ಪರಂತು, ಯಾವ ಸಹಕಾರಿಯು ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ಮಾಡಿಸಲು ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಲು ಮತ್ತು ನಿಯಮಾನುಸಾರ ತಿಳಿಸಲು ವಿಫಲವಾಗಿದೆಯೆಂದು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮನದಟ್ಟಾದಲ್ಲಿ, ಸಂಬಂಧಿತ ಸಹಕಾರಿಗೆ ಲಿಖಿತ ಹೇಳಿಕೆ ನೀಡಲು ಅವಕಾಶ ನೀಡಿದ ತರುವಾಯ ಹಾಗೂ ನೇಮಕ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಅನುಮೋದಿತ ಪಟ್ಟಿಯೊಳಗಿನಿಂದ ಲೆಕ್ಕಪರಿಶೋಧನೆ ಮಾಡಲು ವಿಫಲವಾದ ಅಂಥ ಸಹಕಾರಿಯ ಸಂಬಂಧಿತ ವರ್ಷದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಬಹುದು ಹಾಗೂ ಸದರಿ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ನಿರ್ದಿಷ್ಟ ವರ್ಷಕ್ಕೆ ಆ ಸಹಕಾರಿಯ ಲೆಕ್ಕಪರಿಶೋಧಕರೆಂದು ಪರಿಗಣಿಸತಕ್ಕದ್ದು:

### ಸಂಯುಕ್ತ ಸಹಕಾರಿಯ ನಿರೀಕ್ಷೆಗಳು :

- ನೀವು ನೇಮಕಗೊಂಡಿರುವ ಸಹಕಾರಿ ಸಂಸ್ಥೆಗೆ ಭೇಟಿ ನೀಡಿ ಅಲ್ಲಿಯೇ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಿ. ಇದರಿಂದ ಅಲ್ಲಿ ನಡೆಯುವ ಅನೇಕ ವಿದ್ಯಮಾನಗಳ ಅರಿವು ನಿಮಗಾಗುತ್ತದೆ.
- ಮೋಸ, ವಂಚನೆ, ಹಣ ದುರುಪಯೋಗ ಪ್ರಕರಣಗಳಲ್ಲಿ ಸೂಕ್ತ ದಾಖಲೆಗಳನ್ನು ಪಡೆದುಕೊಳ್ಳಿ, ವರದಿಯನ್ನು ಕಾಯ್ದೆಯ ಕಲಂ 33 (17)ರಲ್ಲಿ ಸ್ಪಷ್ಟಪಡಿಸಿದಂತೆ ವಿವರವಾಗಿ ನೀಡಿ.
- ಕಾಯ್ದೆಯಲ್ಲಿ ತಿಳಿಸಿದಂತೆ ಎಲ್ಲ ಪರಿಶಿಷ್ಟಗಳನ್ನೂ (Schedules) ಕ್ರಮವಾಗಿ ದೃಢೀಕರಿಸಿ ನಿಮ್ಮ ವರದಿಗೆ ಲಗತ್ತಿಸಿ.

ಎಲ್ಲ ಅಡಕಗಳಿಲ್ಲದ ವರದಿಯು ಅಪೂರ್ಣವಾಗಿರುತ್ತದೆ. ತಿರಸ್ಕರಣೆಗೆ ಯೋಗ್ಯವಾಗಿರುತ್ತದೆ.

- ಬಾಹ್ಯ ದೃಢೀಕರಣ ಪತ್ರಗಳನ್ನು (External Confirmations) ನೇರವಾಗಿ ಪಡೆದುಕೊಳ್ಳಿ.
- ವರದಿಗಳನ್ನು ಇಲಾಖೆಗೆ, ಸಂಯುಕ್ತ ಸಹಕಾರಿಗೆ ಸಲ್ಲಿಸುವಾಗ ವಿಳಂಬ ಮಾಡಬೇಡಿ. ಅವುಗಳನ್ನು ನೀವೇ ನೇರವಾಗಿ ಇಲಾಖೆಗೆ, ಸಂಯುಕ್ತ ಸಹಕಾರಿಗೆ ತಲುಪಿಸಿ ಸ್ವೀಕೃತಿ ಪತ್ರವನ್ನು ಪಡೆದುಕೊಳ್ಳಿ. ವರದಿ ಸಲ್ಲಿಸುವಲ್ಲಿನ ವಿಳಂಬಕ್ಕೆ ಯಾವುದೇ ಕಾರಣ ನೀಡುವುದು ಸಮಂಜಸವಾಗದು.
- ಲೆಕ್ಕಪರಿಶೋಧನಾ ವರದಿಯಲ್ಲಿನ ಆರ್ಥಿಕ ತಃಖ್ತೆಗಳಿಗೆ ಸಹಕಾರಿಯ ಪದಾಧಿಕಾರಿಗಳ, ಅಧಿಕಾರಿಗಳ ಸಹಿ ಹಾಕಿಸಿ ನಂತರ ನಿಮ್ಮ ಸಹಿ ಹಾಕಿ ಸಂಯುಕ್ತ ಸಹಕಾರಿಗೆ, ಇಲಾಖೆಗೆ ಸಲ್ಲಿಸಿ.
- ಏಜೆಂಟ್‌ಗಳ ಮೂಲಕ ಬರುವ ಲೆಕ್ಕಪರಿಶೋಧನೆಗಳನ್ನು ವಹಿಸಿಕೊಳ್ಳುವಾಗ, ನಿರ್ವಹಿಸುವಾಗ ತುಂಬಾ ಎಚ್ಚರಿಕೆಯಿಂದಿರಿ. ಲೆಕ್ಕಪರಿಶೋಧನಾ ವರದಿಗೆ ಸಹಿ ಹಾಕುವವರು ನೀವೇ ಆಗಿರುವುದರಿಂದ ಅವುಗಳ ಸಂಪೂರ್ಣ ಹೊಣೆಗಾರಿಕೆ ನಿಮ್ಮದೇ ಆಗಿರುತ್ತದೆ.
- ಲೆಕ್ಕಪರಿಶೋಧನಾ ವರದಿಗಳನ್ನು ಕನ್ನಡದಲ್ಲೇ ನೀಡಿ.
- ಆಡಿಟ್ ವರ್ಗೀಕರಣ ನೀಡುವಾಗ ವಿವರಣೆಯಿರಲಿ. ಮಾನದಂಡಗಳನ್ನು ಪರಿಗಣಿಸುವಾಗ ಎಚ್ಚರಿಕೆಯಿರಲಿ.
- ನಿಮ್ಮ ಕಕ್ಷಿದಾರರೊಡನೆಯಾಗಲೀ, ಇಲಾಖೆಯೊಂದಿಗಾಗಲೀ ವ್ಯವಹರಿಸುವ ಎಲ್ಲದಕ್ಕೂ ಸೂಕ್ತ ದಾಖಲೆಗಳನ್ನು ನಿರ್ವಹಿಸಿ. ಮುಂದೆ ಇವು ನಿಮ್ಮನ್ನು ರಕ್ಷಿಸಬಹುದು.
- ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ನಿಮ್ಮ ಹೆಸರು ಸೂಕ್ತ ವರ್ಗದಲ್ಲಿದೆಯೇ ಎಂದು ಪರೀಕ್ಷಿಸಿಕೊಳ್ಳಿ. ವ್ಯತ್ಯಾಸವಾಗಿದ್ದರೆ ಕೂಡಲೇ ಇಲಾಖೆಯ ಗಮನಕ್ಕೆ ತಂದು ಸರಿಪಡಿಸಿಕೊಳ್ಳಿ.
- ಸಹಕಾರಿಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಯಾವುದೇ ವಿಷಯದಲ್ಲಿ ಗೊಂದಲ, ಅನುಮಾನ, ಪ್ರಶ್ನೆಗಳು ಉದ್ಭವಿಸಿದಲ್ಲಿ ನೇರವಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುವುದು.

**ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಪರಿಶೀಲಿಸುವ ಕ್ರಮವನ್ನು ಮೊದಲಿನಿಂದಲೂ ಅನುಸರಿಸಲಾಗುತ್ತಿದೆ. ಸನ್ನದು ಲೆಕ್ಕಪರಿಶೋಧಕರು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಮಾಡುವಾಗ ಅನೇಕ ವಿಷಯಗಳನ್ನು ಗಮನಿಸಿರುವುದು, ಕೆಲವು ವಿಷಯಗಳ ಬಗ್ಗೆ ವಿವರಣೆ ನೀಡದಿರುವುದು ಮತ್ತು ಕೆಲವು ವಿಷಯಗಳಲ್ಲಿ ಆಡಿಟ್ ವ್ಯಾಪ್ತಿಗೆ ಒಳಪಡಿಸದಿರುವುದು ಕಂಡು ಬಂದಿದೆ. ಲೆಕ್ಕ ಪರಿಶೋಧಕರು ಈ ಕೆಳಕಂಡ ವಿಷಯಗಳಿಗೆ ಗಮನ ಹರಿಸಲು ಕೋರಿದೆ. ಹಾಗೆಯೇ ಈ ಅಂಶಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಪ್ರಕಟಿಸಿದೆ.**

- ನಿರ್ದೇಶಕರ ಸಾಲದ ಬಗ್ಗೆ ಹಾಗೂ ಅವರ ಹಾಜರಾತಿ ಬಗ್ಗೆ, ಸದಸ್ಯರು ಮತ್ತು ನಿರ್ದೇಶಕರು ಹೊಂದಿರುವ ಸುಸ್ಥಿ ಸಾಲದ ಬಗ್ಗೆ ಮಾಹಿತಿಯನ್ನು ಒದಗಿಸುವುದು.
- ಕಾಯ್ದಿಟ್ಟ ನಿಧಿ ಮತ್ತು ಇತರ ನಿಧಿಗಳನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡಿದ ಬಗ್ಗೆ ಮಾಹಿತಿ ಒದಗಿಸುವುದು.
- ಸಹಕಾರಿಯ ಉಲ್ಲಂಘನೆಗಳನ್ನು ಪ್ರತ್ಯೇಕವಾಗಿ ಬಣ್ಣದ ಪುಟಗಳಲ್ಲಿ ನಮೂದಿಸಬೇಕು.
- ಶಾಖೆಗಳನ್ನು ಹೊಂದಿರುವ ಸಹಕಾರಿಗಳ ಕ್ರೋಢಿಕೃತ ಆರ್ಥಿಕ ತಃಖ್ತೆಗಳು ಜೊತೆಗೆ ಶಾಖೆಗಳವಾರು ತಃಖ್ತೆಗಳನ್ನು ಕೂಡ ಸಲ್ಲಿಸಬೇಕು.
- ಸಹಕಾರಿಯ ಬರತಕ್ಕ ಬಡ್ಡಿಯನ್ನು ಆದಾಯವೆಂದು ಪರಿಗಣಿಸಿ, ಲಾಭವನ್ನು ಹೆಚ್ಚಿಗೆ ತೋರಿಸುವುದು ಸೂಕ್ತವಲ್ಲ.
- ಲಾಭ ವಿಂಗಡಣೆಯನ್ನು ನೇರ ಪದ್ಧತಿಯಲ್ಲಿ ಮಾಡುವ ಬಗ್ಗೆ ಮಾರ್ಗದರ್ಶನ ಮಾಡುವುದು.
- ಠೇವುಗಳ ಮೇಲೆ ಕೊಡತಕ್ಕ ಬಡ್ಡಿ ತೋರಿಸುವುದು ಹಾಗೂ ಸಾಲಗಳನ್ನು ಅವುಗಳ ವಿಧಗಳ ಆಧಾರದಲ್ಲಿ ಪ್ರತ್ಯೇಕವಾಗಿ ತೋರಿಸುವುದು.
- ಚಿಟ್ಸ್ ಫಂಡ್‌ಗಳಲ್ಲಿ ಹಾಗೂ ಇತರೆ ವ್ಯವಹಾರಗಳಲ್ಲಿ ಹೂಡಿಕೆ ಮಾಡಿದ ಬಗ್ಗೆ ಹಾಗೂ ಸ್ವೀಕರಿಸಿದ ಬಗ್ಗೆ ನಮೂದಿಸಬೇಕು.
- ಸಹಕಾರಿಯೊಂದು ಮತ್ತೊಂದು ಸಹಕಾರಿಯಲ್ಲಿ ಯಾವುದೇ ತರಹದ ಹೂಡಿಕೆಗಳನ್ನು ಹೊಂದುವುದು ಸೌಹಾರ್ದ ಸಹಕಾರಿ ಕಾಯ್ದೆಯ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.
- ಸಂಯುಕ್ತ ಸಹಕಾರಿಯ ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿಯ ನಿರ್ದೇಶನದಂತೆ ಸಹಕಾರಿಯು ತಾನು ಹೊಂದಿರುವ ಒಟ್ಟು ಮೀಸಲು ನಿಧಿಯನ್ನು ತನ್ನ ವ್ಯವಹಾರದ ಹೊರಗೆ ಠೇವಣಿಯಾಗಿಡಬೇಕಾಗುತ್ತದೆ. ಈ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.

(ಮುಂದಿನ ಸಂಚಿಕೆಗೆ...)



# RBI NEWS – JANUARY 2017

⏩ **K. Vittal Shetty,** Banking Consultant, kohimavittal@Hotmail.com, Mobile:9845699904

The next meeting of the MPC is scheduled on February 7 & 8, 2017 and its resolution will be placed on the Reserve Bank's website on February 8, 2017.

| Policy Rates with effect from 04 October 2016. | % |
|---|---|
| POLICY REPO RATE | 6.25% |
| REVERSE REPO RATE | 5.75% |
| MARGINAL STANDING FACILITY RATE | 6.75% |
| BANK RATE | 6.75% |
| Reserve Ratios | % |
| Cash Reserve Ratio | 4.00% |
| Statutory Reserve Ratio | 20.50% |

## IMPORTANT NEWS

**January 03, 2017 : Allocation of cash for rural areas.**

On observing that bank notes, being supplied to rural areas, at present, are not commensurate with the requirements of rural population, some steps have already been initiated as indicated in the above circulars. With a view to ensure that at least 40% bank notes are supplied to rural areas and to mitigate the issue in a more enduring manner, the banks maintaining currency chests are advised to take the necessary steps, in continuation of the directions already they have.

**Distribution Channels and Proportion of currency flow Reporting for monitoring**

iv. Currency chests must furnish daily issuances to the above categories to their Link Offices (LO) along with chest slips with a weekly summary as at close of business on every Friday. LOs should in turn forward it to the RBI's Regional Office concerned (reporting format annexed) to facilitate a review. It may be similar to the chest balances reporting mechanism (Annex 2). LOs may monitor the daily reports to avoid lumpiness in issuances and to ensure that issuances are evenly.

**Denominational mix**

v. Chests should issue bank notes in denominations of ₹ 500 and below. In particular ATMs, including WLAOs, may be issued ₹ 500s and ₹ 100s and among ATMs category, Off-site ATMs should be allocated higher proportion of cash as against on site ATMs as they are more important in last mile currency connectivity.

vi. Existing stock of other denominations notes below ₹ 100 should be issued liberally.

vii. Banks should indent for coins, obtain supply from Issue Departments of Reserve Bank of India, if required, and ensure supply to public on priority basis.

**Jan 20, 2017:** Pradhan Mantri Garib Kalyan Deposit Scheme (PMGKDS), 2016 – Amended

The Government of India, in consultation with the

**Date : Jan 19, 2017**

**Scheduled Bank's Statement of Position in India as on Friday, January 06, 2017 (Revised)**

**(Amount in Billions of ₹)**

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | 8-Jan-16 | 23-DEC-2016 * | 06-JAN-2017 * | 8-Jan-16 | 23-DEC-2016 * | 06-JAN-2017 * |
| I | a) Deposits | 92258.72 | 105162.37 | 105841.71 | **94716.61** | 108055.68 | **108739.45** |
| | i) Demand | 8229.5 | 10859.66 | 10805.87 | **8426.36** | 11147.55 | **11092.16** |
| | ii) Time | 84029.22 | 94302.58 | 95035.91 | **86290.25** | 96908 | **97647.36** |
| II | INVESTMENTS | 27270.03 | 36092.57 | 36351.89 | **28019.31** | 36969.45 | **37253.58** |
| III | BANK CREDIT | 70506.23 | 73480.54 | 74134.15 | **72635.83** | 75702.51 | **76371.31** |

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 24

Reserve Bank of India, had notified Pradhan Mantri Garib Kalyan Deposit Scheme (PMGKDS), 2016 vide notification no. S.O. 4061 (E) dated December 16, 2016. The deposit under this Scheme shall be made by any person who declared undisclosed income under Pradhan Mantri Garib Kalyan Yojana, 2016. The deposit sum, which shall not be less than twenty-five per cent of the declared undisclosed income, can be deposited at the authorized banks (as notified by Government of India) from December 17, 2016 (Saturday) to March 31, 2017 (Friday). In this connection, it is clarified that Co-operative Banks are not authorised banks to accept deposits under PMGKDS, 2016. Para 7 (1) of the notification stands amended as under:

"7. Authorised banks.-(1) Application for the deposit in the form of Bonds Ledger Account shall be received by any banking company, other than Co-operative Banks,to which the Banking Regulation Act, 1949 (10 of 1949) applies."

**January 30, 2017 :** Limits on Cash withdrawals from Bank accounts and ATMs - Restoration of status quo ante Refer to our circular DCM (Plg) No.1226/10.27.00/2016-17 dated November 08, 2016 placing limits on Cash withdrawals from bank accounts and ATMs in the wake of withdrawal of Legal Tender Character of Specified Bank Notes (SBN) and subsequent circulars DCM (Plg) Nos.1256, 1274, 1317, 1437, 2142 and 2559 dated November 11, 14, 21, 28, December 30, 2016 and January 16, 2017 respectively, providing for relief and relaxations therefrom.

**2. On a review of the pace of remonitisation, it has been decided to partially restore status quo ante as under :**

i. Limits placed vide the circulars cited above on cash withdrawals from Current accounts/ Cash credit accounts/ Overdraft accounts stand withdrawn with immediate effect.

ii. The limits on Savings Bank accounts will continue for the present and are under consideration for withdrawal in the near future.

iii. Limits vide the circulars cited above placed on cash withdrawals from ATMs stand withdrawn from February 01, 2017. However, banks may, at their discretion, have their own operating limits as was the case before November 8, 2016, subject to 2 (ii) above.

3. Further, banks are urged to encourage their constituents to sustain the movement towards digitisation of payments and switching over of payments from cash mode to non-cash mode.

Directions, Withdrwals, Penalties & Cancelleation of Licences of Urban Co-operative Banks.

- RBI imposes penalty of ₹ 1.00 lakh (₹ One Lakh only)on Mumbai District Central Co-operative Bank Ltd., Mumbai, Maharashtra.
- RBI extends Direction issued to the Amanath Co-operative Bank Ltd., Bengaluru.
- RBI extends Directions issued to the Brahmawart Commercial Co-operative Bank Ltd., Kanpur Uttar Pradesh.
- RBI Imposes Monetary Penalty of ₹ 30 million on Lakshmi Vilas Bank.
- RBI extends Directions issued to The Suri Friends' Union Co-operative Bank Ltd., Suri, West Bengal.
- RBI extends Directions issued to the Brahmawart Commercial Co-operative Bank Ltd., Kanpur, Uttar Pradesh till July 06, 2017.
- RBI imposes penalty on Bombay Mercantile Co-operative Bank Ltd., Mumbai.
- RBI extends Directions issued to The Mahamedha Urban Co-operative Bank Ltd., Ghazibad, Uttar Pradesh.
- RBI extends Directions issued to The Hardoi Urban Co-operative Bank Ltd., Uttar Pradesh.
- RBI extends Directions issued to The CKP Co-operative Bank Ltd., Mumbai, Maharashtra.

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010